# ಕಬ್ಬಿಣದ ಅದಿರನ ರಫ್ತು ನಿಷೇದ ಮಾಡಿದ ಶ್ರೀ ಬಿ.ಎಸ್.ಯಡಿಯೂರಪ್ಪನವರು ರಾಷ್ಟ್ರದಲ್ಲಿ ಪ್ರಥಮ ಮುಖ್ಯಮಂತ್ರಿಯಲ್ಲವೇ?

ಗಣಿಗಳಿಂದ ಮಿತಿಮೀರಿ ಅದಿರನ್ನು ತೆಗೆಯುವುದು ಮತ್ತು ಅಕ್ರಮ ಗಣಿಗಾರಿಕೆಯ ಸಮಸ್ಯೆಯು ಭಾರತದಲ್ಲಿನ ಎಲ್ಲ ಖನಿಜ ಸಂಪದ್ಭರಿತ ರಾಜ್ಯಗಳ ಮುಖ್ಯ ಕಾಳಜಿಯ ವಿಷಯವಾಗಿದೆ. ಹಲವಾರು ರಾಜ್ಯ ಸರ್ಕಾರಗಳು ಪ್ರಯತ್ನಗಳನ್ನು ಮಾಡಿದ್ದರೂ, ಈ ಸಮಸ್ಯೆಗಳು ರಾಜ್ಯಗಳ ಎಲ್ಲೆಡೆಗಳಲ್ಲಿ ಜೀವಂತವಾಗಿವೆ. ವಿವೇಚನಾರಹಿತವಾಗಿ ಕಬ್ಬಿಣದ ಅದಿರನ್ನು ಮತ್ತು ಅಂಥ ಇತರ ಖನಿಜಗಳನ್ನು ರಫ್ತು ಮಾಡುತ್ತಿರುವುದೇ ಈ ಸಮಸ್ಯೆಗೆ ಒಂದು ಪ್ರಮುಖ ಕಾರಣ. ಕಬ್ಬಿಣದ ಅದಿರು ಮುಂತಾದವುಗಳ ರಫ್ತಿನ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸದಿದ್ದರೆ, ಮಿತಿಮೀರಿದ ಅದಿರು ತೆಗೆಯುವ ಮತ್ತು ಅಕ್ರಮ ಗಣಿಗಾರಿಕೆಯ ಚಟುವಟಿಕೆಯ ಹಾಗೆಯೇ ಮುಂದುವರೆಯುವ ಸಂಭವವಿದೆ.

ಈಗ ನಡೆಯುತ್ತಿರುವ ಪ್ರಮಾಣದಲ್ಲಿಯೇ ಗಣಿ ಚಟುವಟಿಕೆಗಳು ಮುಂದುವರೆಯಲು ನಾವು ಅವಕಾಶ ನೀಡಿದರೆ, ಅದು ಜೀವಿ ಪರಿಸರ ಅಸಮತೋಲನವನ್ನು ಉಂಟು ಮಾಡಿ ಬೃಹತ್ ಪ್ರಮಾಣದಲ್ಲಿ ಜನರು ವಲಸೆ ಹೋಗುವುದಕ್ಕೆ ಎಡೆಮಾಡಿಕೊಡುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಭಾರತದಲ್ಲಿ ಭೂಮಿಯಿಂದ ತೆಗೆಯಲಾಗುವ ಕಬ್ಬಿಣದ ಅದಿರಿನ ಸುಮಾರು ಶೇ.58ರಷ್ಟು ರಫ್ತು ಮಾಡಲಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಈ ಪ್ರವೃತ್ತಿಗೆ ಕಡಿವಾಣ ಹಾಕುವ ತುರ್ತು ಅಗತ್ಯವಿದೆ. ವಿವೇಚನಾ ರಹಿತವಾಗಿ ರಫ್ತು ಮಾಡುವ ಮೂಲಕ ಅಂಧರಂತೆ ನಮ್ಮ ಪ್ರಾಕೃತಿಕ ಸಂಪನ್ಮೂಲಗಳನ್ನು ಬರಿದು ಮಾಡಿಕೊಳ್ಳುವುದಕ್ಕೆ ಬದಲಾಗಿ ದೇಶದ ಒಳಗಡೆಯೇ ಮೌಲ್ಯವರ್ಧನೆಯನ್ನು ಮಾಡುವ ಮಾರ್ಗೋಪಾಯಗಳನ್ನು ನಾವು ಕಂಡುಕೊಳ್ಳಬೇಕಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವ ರಾಜ್ಯ ಸರ್ಕಾರವು, ಸರ್ಕಾರಿ ಆದೇಶ ಸಂಖ್ಯೆ ಸಿ1–162/ಎಂಎಂಎಂ/2010 ದಿನಾಂಕ: 28.7.2010ರ ಮೂಲಕ ರಾಜ್ಯದಿಂದ ಕಬ್ಬಿಣ ಅದಿರನ್ನು ರಫ್ತು ಮಾಡಲು ನೀಡುತ್ತಿದ್ದ ಪರವಾನಗಿಗಳನ್ನು ರಾಜ್ಯದ ಎಲ್ಲಾ 10 ಬಂದರುಗಳಿಂದ ಕಬ್ಬಿಣ ಅದಿರು ರಫ್ತುಗಳನ್ನು ನಿಷೇಧಿಸುವಂಥ ಒಂದು ದಿಟ್ಟ ನಿರ್ಣಯವನ್ನು ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ತೆಗೆದುಕೊಂಡಿದೆ. ಈ ಸರ್ಕಾರಿ ಆದೇಶವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು. ಮಾನ್ಯ ಉಚ್ಚನ್ಯಾಯಾಲಯದ ವಿಭಾಗೀಯ ಪೀಠವು, ದಿನಾಂಕ: 19.11.2010ರ ತೀರ್ಪಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಸದರೀ ಆದೇಶವನ್ನು ಎತ್ತಿಹಿಡಿದಿದೆ.

ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರು 17.7.2010ರಂದು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ದೇಶದಾದ್ಯಂತ ಕಬ್ಬಿಣದ ಅದಿರು ರಫ್ತು ನಿಷೇದಿಸುವಂತೆ ಮನವಿ ಸಲ್ಲಿಸಿದ್ದಾರೆ.

ನಂತರ 24.7.2010ರಂದು ದೆಹಲಿಯಲ್ಲಿ ಜರುಗಿದ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿಯೂ ಈ ಕುರಿತಂತೆ ಮುಖ್ಯ ಮಂತ್ರಿಗಳು ತೀವ್ರವಾಗಿ ಪ್ರತಿಪಾದಿಸಿದ್ದಾರೆ. ಈ ರೀತಿಯ ಕ್ರಮವನ್ನು ಕೋರಿರುವ ದೇಶದ ಒಂದೇ ರಾಜ್ಯ ಕರ್ನಾಟಕ.

ಕೇಂದ್ರ ಸರ್ಕಾರ ಮಾತ್ರ ರಫ್ತು ನಿಷೇದದ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಮೌನ ವಹಿಸಿದೆ. ರಾಷ್ಟ್ರದ ನೈಸರ್ಗಿಕ ಸಂಪತ್ತನ್ನು ಮುಂದಿನ ಪೀಳಿಗೆಗೆ ಕಾಪಾಡುವ ಆಸಕ್ತಿ ಕೇಂದ್ರ ಸರ್ಕಾರಕ್ಕೆ ಇದೆಯೇ ಎಂಬ ಪ್ರಶ್ನೆ.

ಶ್ರೀ ಬಿ.ಎಸ್.ಯಡಿಯೂರಪ್ಪನವರು ತೆಗೆದುಕೊಂಡ ರಫ್ತು ನಿಷೇದದ ದಿಟ್ಟತನವನ್ನು ಕೇಂದ್ರ ಸರ್ಕಾರ ಇದುವರೆವಿಗೆ ಪ್ರದರ್ಶಿಸಲಿಲ್ಲವೇಕೆ?

## ರಫ್ತಿನ ಕಾಯ್ದೆಯಲ್ಲಿನ ದೋಷ

ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮದ ನಂತರ ಕೇಂದ್ರ ಹಣಕಾಸು ಸಚಿವರಾದ ಪ್ರನಬ್ ಮುಖರ್ಜಿ ನೇತೃತ್ವದಲ್ಲಿ ದಿನಾಂಕ:22/07/2010ರಂದು ನಡೆದ ಸಚಿವರ ಸಭೆ ರಫ್ತಿನ ಕಾಯ್ದೆ 1957ರಲ್ಲಿನ ಲೋಪದೋಷಗಳನ್ನು ದೃಢೀಕರಿಸಿದೆ.

## ಇದುವರೆಗಿನ ರಫ್ತಿನ ವಿವರ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಬ್ಬಿಣದ ಅದಿರಿಗೆ ಬೇಡಿಕೆ ಹೆಚ್ಚಾಗಿದ್ದರಿಂದ, ಕಳೆದ ಹಲವಾರು ವರ್ಷಗಳಲ್ಲಿ ಕಬ್ಬಿಣದ ಅದಿರಿನ ಬೆಲೆ ಗಣನೀಯವಾಗಿ ಅಧಿಕವಾಗಿದೆ. ಅಧಿಕ ಬೇಡಿಕೆ ಹಾಗೂ ಅಧಿಕ ಲಾಭಾಂಶದ ಹಿನ್ನೆಲೆಯಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆ ಗಣನೀಯವಾಗಿ ಹೆಚ್ಚಾಗಿದೆ. ಈ ಕಾರಣದಿಂದಾಗಿ ರಾಜ್ಯದ ರಸ್ತೆಗಳು ಹದಗೆಟ್ಟಿರುವುದಲ್ಲದೆ ಒಟ್ಟಾರೆ ಪರಿಸರದ ಮೇಲೆಯೂ ನಕಾರಾತ್ಮಕ ಪರಿಣಾಮಗಳಾಗಿದೆ. ಹಲವಾರು ಗಣಿ ಪ್ರದೇಶಗಳಲ್ಲಿ ಜನತೆಯ ಸಾಮಾನ್ಯ ಜೀವನ ಶೈಲಿ ಸಹ ಕುಂಠಿತಗೊಂಡಿದೆ. ಜೊತೆಗೆ ಅಕ್ರಮ ಗಣಿಗಾರಿಕೆ ಹಾಗೂ ಕಡಿಮೆ ರಾಯಲ್ಟಿ ಶುಲ್ಕದಿಂದಾಗಿ ರಾಜ್ಯದ ಬೊಕ್ಕಸಕ್ಕೂ ತೀವ್ರ ನಷ್ಟವಾಗಿದೆ.

## 2003–04ರಿಂದ 2009–10ರವರೆವಿಗೆ ಪರವಾನಗಿ ಮತ್ತು ಪರವಾನಗಿ ರಹಿತ ಖನಿಜ ರಫ್ತಿನ ವಿವರ

| ಕ್ರಮ ಸಂಖ್ಯೆ | ವರ್ಷ | ಪರವಾನಗಿ ಕೊಟ್ಟಿರುವುದು (ಲಕ್ಷ ಎಂ.ಟಿ.) | ರಫ್ತು ಮಾಡಿರುವುದು (ಲಕ್ಷ ಎಂ.ಟಿ) | ವ್ಯತ್ಯಾಸ ಪರವಾನಗಿ ರಹಿತ (ಲಕ್ಷ ಎಂ.ಟಿ) |
|---|---|---|---|---|
| 1 | 2003–04 | 23.27 | 45.76 | 20.49 |
| 2 | 2004–05 | 64.51 | 116.91 | 52.39 |
| 3 | 2005–06 | 92.99 | 114.71 | 21.71 |
| 4 | 2006–07 | 60.55 | 108.00 | 47.44 |
| 5 | 2007–08 | 89.73 | 147.34 | 57.61 |
| 6 | 2008–09 | 76.64 | 110.60 | 33.96 |
| 7 | 2009–10 | 60.71 | 131.99 | 71.27 |
| | ಒಟ್ಟು | 468.42 | 775.31 | 306.89 |

**ಷರಾ:–**

- ಪರವಾನಗಿ ರಹಿತ ಖನಿಜು 2003–04ರಿಂದ ಕಾಂಗ್ರೇಸ್, ಜೆ.ಡಿ.ಎಸ್ ಮತ್ತು ರಾಜ್ಯಪಾಲರು ಆಡಳಿತಗಳಲ್ಲಿ ನಡೆದಿರುವುದು ಸ್ಪಷ್ಟವಾಗಿದೆ. ಆದರೆ ಆ ಬಗ್ಗೆ ಯಾವುದೇ ಪ್ರಚಾರವಿಲ್ಲದಿರುವುದಕ್ಕೆ ಕಾರಣವೇನು?
- ಪ್ರಥಮದಲ್ಲಿ ರಫ್ತು ನಿಷೇದ ಮಾಡಿದ್ದರೆ ಇಂದು ಕರ್ನಾಟಕ ರಾಜ್ಯ ಆರ್ಥಿಕವಾಗಿ ಸಂಪತ್‌ರಿತವಾಗುತ್ತಿರಲಿಲ್ಲವೆ?
- ಹಿಂದಿನ ಎಲ್ಲಾ ಮುಖ್ಯಮಂತ್ರಿಗಳು ಪರವಾನಗೆ ರಹಿತ ರಫ್ತನ್ನು ನೋಡಿ ಸುಮ್ಮನೆ ಕುಳಿತರಲ್ಲವೆ? ಅದರ ಹಿಂದೆ ಭ್ರಷ್ಟಾಚಾರವಿಲ್ಲವೆ? ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಿಲ್ಲವೇಕೆ?
- ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ರಫ್ತು ನಿಷೇದ ಮಾಡಿ ದಿಟ್ಟತನವನ್ನು ತೋರಿದ ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು ಅಪರಾಧಿಯಂತೆ ಬಿಂಬಿಸುವುದು ನ್ಯಾಯವೇ? ವಿಮರ್ಶಿಸಿ.

# ಹೊಸ ಖನಿಜ ನೀತಿ

ದಿನಾಂಕ 03.06.2010 ಮತ್ತು 04.06.2010 ರಂದು ನಡೆದ ಅತ್ಯಂತ ಪ್ರಶಂಸೆಗೊಳಗಾದ ಜಾಗತಿಕ ಹೂಡಿಕೆದಾರರ ಸಮಾವೇಶವು 90.83 ಎಂಟಿಪಿಎ ಯಷ್ಟು ಕಬ್ಬಿಣದ ಅದಿರು ಬಳಸಿಕೊಳ್ಳಲು 53 ಉಕ್ಕುಸ್ಥಾವರಗಳನ್ನು ಸ್ಥಾಪಿಸಲು 53 ಮಂದಿ ಭಾವೀ ಹೂಡಿಕೆದಾರರು ಒಪ್ಪಂದಪತ್ರಕ್ಕೆ ಸಹಿ ಮಾಡಲು ಕಾರಣವಾಯಿತು. ಇದರಿಂದ, ರಾಜ್ಯದಿಂದ ಆಗುತ್ತಿರುವ ರಫ್ತನ್ನು ಗಣನೀಯವಾಗಿ ತಗ್ಗಿಸಲು ಪ್ರೋತ್ಸಾಹ ನೀಡಿದಂತಾಯಿತು. ರಾಜ್ಯದೊಂದಿಗೆ ಒಪ್ಪಂದ ಪತ್ರಕ್ಕೆ ಸಹಿ ಮಾಡಿರುವ ಕೆಲವು ಬಹುರಾಷ್ಟ್ರೀಯ ಕಂಪನಿಗಳು ಮತ್ತು ರಾಷ್ಟ್ರೀಯ ಸ್ಟೀಲ್ ಕಂಪನಿಗಳೆಂದರೆ – ಆರ್ಸೆಲರ್ ಮಿಟ್ಟಲ್, ಪೋಸ್ಕೊ, ಟಾಟಾ ಮೆಟಾಲಿಕ್ಸ್, ಎಸ್ಸಾರ್ ಇತ್ಯಾದಿ. ಬಿಜೆಪಿ ಸರ್ಕಾರವು, ಮೌಲ್ಯವರ್ಧನೆ ಮಾಡುವುದಾಗಿ ತಿಳಿಸಿರುವ ಅರ್ಜಿದಾರರ 23 ಪ್ರಕರಣಗಳ ಸಂಬಂಧದಲ್ಲಿ ಮಾತ್ರ ಭಾರತ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ರಾಜ್ಯ ಸರ್ಕಾರವು, ರಾಜ್ಯದಲ್ಲಿ ಮೌಲ್ಯವರ್ಧನೆಗೆ ಉತ್ತೇಜನ ನೀಡಲು ಮತ್ತು ಖನಿಜಗಳಿಗೆ (ಕಬ್ಬಿಣದ ಅದಿರು) ರಿಯಾಯಿತಿ ಮಂಜೂರು ಮಾಡುವಲ್ಲಿ ಪಾರದರ್ಶಕತೆ ಕಾಪಾಡುವ ದೃಷ್ಟಿಯಿಂದ ಇದುವರೆಗೂ ಖನಿಜಗಳನ್ನು ತೆಗೆದಿಲ್ಲದಿರುವ 10.00 ಹೆಕ್ಟೇರುಗಳಿಗೂ ಹೆಚ್ಚು ಪ್ರದೇಶಗಳನ್ನು ಅಧಿಸೂಚಿಸಲು ನಿರ್ಧಾರ ತೆಗೆದುಕೊಂಡಿದೆ.

## ವಿವಿಧ ಸರ್ಕಾರಗಳು ಶಿಫಾರಸ್ಸು ಮಾಢಿರುವ ಗಣಿಗುತ್ತಿಗೆಗಳ ವಿವರ ಈ ಮುಂದಿನಂತಿದೆ.

| ಮುಖ್ಯಮಂತ್ರಿ | ರಾಜ್ಯ ಸರ್ಕಾರ ಶಿಫಾರಸು ಮಾಡಿರುವ ಪ್ರಕರಣಗಳ ಸಂಖ್ಯೆ | ಕೇಂದ್ರ ಸರ್ಕಾರ ಅನುಮತಿ ನೀಡಿರುವ ಸಂಖ್ಯೆ | ಅಧಿಸೂಚನೆ ಹೊರಡಿಸಿರುವುದು |
|---|---|---|---|
| ಶ್ರೀ ಧರಮ್ ಸಿಂಗ್ | 43 | 37 | 33 |
| ಶ್ರೀ ಹೆಚ್.ಡಿ.ಕುಮಾರಸ್ವಾಮಿ | 47 | 22 | 19 |
| ಘನತೆವೆತ್ತ ರಾಜ್ಯಪಾಲರು | 22 | 14 | 09 |
| ಶ್ರೀ ಬಿ.ಎಸ್.ಯಡಿಯೂರಪ್ಪ | 23 | 03 | 03 |

ಹಿಂದಿನ ಸರ್ಕಾರಗಳಿಗೆ ಹೋಲಿಸಿದರೆ ಈಗಿನ ಸರ್ಕಾರವು ಗಣಿ ಗುತ್ತಿಗೆಗಳನ್ನು ಶಿಫಾರಸು ಮಾಡುವಲ್ಲಿ ಎಚ್ಚರವಹಿಸಿದೆ. ಅಲ್ಲದೆ, ಹೊಸ ಗುತ್ತಿಗೆಗಾಗಿ ಈ ಸರ್ಕಾರವು ಮಾಡಿರುವಂಥ ಎಲ್ಲ ಶಿಫಾರಸುಗಳು ಮೌಲ್ಯವರ್ಧನ ತತ್ವಗಳ ಮೇಲೆ ಆಧಾರಿತವಾಗಿವೆ. ಈ ಸರ್ಕಾರವು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಿರುವ ಗುತ್ತಿಗೆಗಳಿಗೆ ಹೋಲಿಸಿದರೆ ಹಿಂದಿನ ಸರ್ಕಾರಗಳು ಹೆಚ್ಚಿನ ಸಂಖ್ಯೆಯ ಗುತ್ತಿಗೆಗಳನ್ನು ಶಿಫಾರಸು ಮಾಡಿವೆ. ಹಿಂದಿನ ಸರ್ಕಾರಗಳು ಮೌಲ್ಯವರ್ಧನೆಯ ಉದ್ದೇಶವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿವೆ. ಈ ಸರ್ಕಾರವು ಮೌಲ್ಯವರ್ಧಿಸುವವರ ಗುತ್ತಿಗೆಗಳನ್ನು ಶಿಫಾರಸು ಮಾಡಲು ಆದ್ಯತೆ ನೀಡಿ ಒಳ್ಳೆಯ ಮೇಲ್ಪಂಕ್ತಿ ಹಾಕಿದೆ ಎಂಬುದು ಸರ್ವವಿಧಿತ.

## ರಾಜ್ಯದಲ್ಲಿ ಖನಿಜ ಸಂಪನ್ಮೂಲ

ಕರ್ನಾಟಕ ರಾಜ್ಯವು ದೇಶದಲ್ಲಿನ ಖನಿಜ ಶ್ರೀಮಂತ ರಾಜ್ಯಗಳಲ್ಲಿ ಒಂದಾಗಿದ್ದು ಇದರಲ್ಲಿ ಸರಿಸುಮಾರು 465 ದಶಲಕ್ಷ ಟನ್‌ಗಳಷ್ಟು ಪ್ರೊವ್ಡ್ ಹೆಮಟೈಟ್ ಕಬ್ಬಿಣದ ಅದಿರು ಮತ್ತು 7811 ದಶಲಕ್ಷಟನ್‌ಗಳಷ್ಟು ಮ್ಯಾಗ್ನಟೈಟ್ ಸಂಪನ್ಮೂಲವಿದೆ. ಕರ್ನಾಟಕದಲ್ಲಿ ಮ್ಯಾಗ್ನಟೈಟ್ ಅದಿರಿನ ಅಂಶವುಳ್ಳ ಅಧಿಕ ಪ್ರಮಾಣದ ಸಂಪನ್ಮೂಲವು ಜೀವಿಪರಿಸರ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶವಾಗಿರುವ ಪಶ್ಚಿಮಘಟ್ಟಗಳಲ್ಲಿದ್ದು ಅದು ಹೊರತೆಗೆಯಲು ಲಭ್ಯವಿಲ್ಲ. ಬಹುತೇಕ ಕಬ್ಬಿಣ ಅದಿರಿನ ಸಂಪನ್ಮೂಲವು ರಾಜ್ಯದ ಮೂರು ಜಿಲ್ಲೆಗಳಾದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ದೊರಕುತ್ತದೆ. ಪ್ರಸ್ತುತ ರಾಜ್ಯದಲ್ಲಿ ಕಬ್ಬಿಣದ ಅದಿರಿನ ಉತ್ಪಾದನೆಯ ಸುಮಾರು 49 ದಶಲಕ್ಷ ಟನ್‌ಗಳಾಗಿದ್ದು ಇದರ ಪೈಕಿ ಶೇ.70ರಷ್ಟು ಪುಡಿ ರೂಪದಲ್ಲಿದೆ ಮತ್ತು ಶೇ.30 ಗಟ್ಟಿಗಳ ರೂಪದಲ್ಲಿದೆ.

**ಷರಾ:**

- ಗಣಿಗಾರಿಕೆ ಪ್ರಾರಂಭದಲ್ಲಿ ಗಣಿ ನೀತಿಯನ್ನು ಮುಖ್ಯವಾಗಿ ಅಂದಿನ ಕಾಂಗ್ರೇಸ್ ಮತ್ತು ಜೆ.ಡಿ.ಎಸ್ ಸರ್ಕಾರಗಳು ಜಾರಿಮಾಡಲಿಲ್ಲವೇಕೆ?
- ನೈಸರ್ಗಿಕ ಸಂಪತ್ತನ್ನು ನಿರಾಯಾಸವಾಗಿ ಕೊಳ್ಳೆ ಹೊಡೆಯಲು ಬಿಟ್ಟವರಾರು ಮತ್ತು ಯಾವ ಸರ್ಕಾರ? ರಾಜ್ಯ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿವೆ.

**ನೈಸರ್ಗಿಕ ಸಂಪತ್ತನ್ನು ಕಾಪಾಡಿ ಕರ್ನಾಟಕ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಬರುವಂತೆ ಮಾಡಲು ಖನಿಜ ನೀತಿ ಜಾರಿ ಮಾಡಿದ ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು ಅಪರಾಧಿ ಸ್ಥಾನದಲ್ಲಿ ನೋಡುವುದರಲ್ಲಿ ಅರ್ಥವಿದಯೇ? ನ್ಯಾಯವಿದೆಯೇ?**

## ಅಕ್ರಮ ಗಣಿಗಾರಿಕೆ ನಿಯಂತ್ರಣಕ್ಕೆ ತೆಗೆದುಕೊಂಡ ಕ್ರಮಗಳು

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಶ್ರೀ ಬಿ.ಎಸ್.ಯಡಿಯೂರಪ್ಪ ಸರ್ಕಾರವು ತೆಗೆದುಕೊಂಡಿರುವ ಕೆಲವು ಕ್ರಮಗಳೆಂದರೆ:– ಬಲ್ಕ್ ಪರ್ಮಿಟ್‌ಗಳನ್ನು ನಿಲ್ಲಿಸಿರುವುದು, ಇ–ಪರ್ಮಿಟ್‌ಗಳ ಅನುಷ್ಠಾನ, ಖಾಸಗಿ ದಾಸ್ತಾನು ಯಾರ್ಡ್‌ಗಳ ರದ್ದತಿ, ತಪಾಸಣೆಯನ್ನು ತೀವ್ರಗೊಳಿಸಿರುವುದು, ಚೆಕ್‌ಪೋಸ್ಟ್‌ಗಳಲ್ಲಿ ಎಲ್ಲಾ ಸಮಯದಲ್ಲಿ ಕಂಪ್ಯೂಟರ್ ಆಧಾರಿತ ನಿಯಂತ್ರಣ ಇತ್ಯಾದಿ.

ಈ ಎಲ್ಲಾ ಕ್ರಮಗಳಿಂದಾಗಿ ಕಬ್ಬಿಣದ ಅದಿರಿನ ರಫ್ತು ರದ್ದತಿ ಇದ್ದರೂ ಸಹ ರಾಜ್ಯದಲ್ಲಿ ಗಣಿ ರಾಜಸ್ವ ಮೊತ್ತ ಗಣನೀಯವಾಗಿ ಅಧಿಕವಾಗಿದೆ. ಜುಲೈ 2010ರಲ್ಲಿಯೇ ಕಬ್ಬಿಣದ ಅದಿರಿನ ರಫ್ತನ್ನು ನಿಷೇದಿಸಿದ್ದರೂ ಸಹ, 2009–10ರಲ್ಲಿ ಸಂಗ್ರಹವಾಗಿದ್ದ ಕಬ್ಬಿಣದ ಅದಿರಿನ ರಾಜಸ್ವ ಮೊತ್ತವಾದ 319.59 ಕೋಟಿ ರೂ.ಗಳ ಬದಲಾಗಿ 2010–11ನೇ ಸಾಲಿನಲ್ಲಿ 434.76 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆಯಾಗಿದೆ.

ಮೇಲಿನ ಎಲ್ಲಾ ಅಂಶಗಳಿಂದ ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಸರ್ಕಾರಗಳು ಬೇಜವಾಬ್ದಾರಿಯಿಂದ ವರ್ತಿಸಿ, ಅಕ್ರಮ ಗಣಿ ಮಾಲೀಕರೊಂದಿಗೆ ಶಾಮೀಲರಾಗಿ ರಾಜ್ಯದಲ್ಲಿ ದೊಡ್ಡ ಪ್ರಮಾಣದ ಅಕ್ರಮ ಗಣಿಗಾರಿಕೆಗೆ ಕಾರಣಕರ್ತರಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಅವರ ಸರ್ಕಾರಗಳ ಅವಧಿಯಲ್ಲಿ ಅಕ್ರಮ ಗಣಿಗಾರಿಕೆಯ ನಿಯಂತ್ರಣಕ್ಕೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಬದಲಾಗಿ ಅಕ್ರಮ ಗಣಿಗಾರಿಕೆಗೆ ಅವರು ಇಂಬು ನೀಡಿದ್ದಾರೆ. ಇಷ್ಟೇಲ್ಲಾ ಇದ್ದರೂ ಸಹ ಈ ಪಕ್ಷಗಳು ಪ್ರಸಕ್ತ ಬಿಜೆಪಿ ಸರ್ಕಾರದ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುತ್ತಾ ಜನತೆಗೆ ದಿಕ್ಕು ತಪ್ಪಿಸುತ್ತಿದ್ದಾರೆ.

**ಷರಾ:**

ಹಿಂದಿನ ಸರ್ಕಾರಗಳು ಅಕ್ರಮ ಗಣಿಗಾರಿಕೆ ತಡೆಗಟ್ಟಲು ಯಾವ ಕ್ರಮವನ್ನು ತೆಗೆದುಕೊಳ್ಳದಿರಲು ಕಾರಣವೇನು? ಅವರಲ್ಲಿ ಉತ್ತರವಿದೆಯೇ?

ಅಕ್ರಮ ಗಣಿಗಾರಿಕೆ ತಪ್ಪಿಸಲು ದಿಟ್ಟಕ್ರಮ ತೆಗೆದುಕೊಂಡು ಸರ್ಕಾರ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಸಂಗ್ರಹಯಕ್ಕೆ ಕಾರಣವಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಮೇಲೆ ಬೊಟ್ಟೆ ಹಾಕುವುದರಲ್ಲಿ ಅರ್ಥವಿದೆಯೇ?

## ಮೈಸೂರು ಮಿನರಲ್ಸ್ ಲಿಮಿಟೆಡ್ ರವರ ತಿಮ್ಮಪ್ಪನಗುಡಿ ಕಬ್ಬಿಣದ ಗಣಿಯಿಂದ ಅದಿರನ್ನು M/s JSWL ರವರೊಂದಿಗೆ ಜಂಟಿ ಉದ್ಯಮ ಮುಖಾಂತರ ಗಣಿಗಾರಿಕೆ ಬಗ್ಗೆ ಟಿಪ್ಪಣಿ

### ಹಿನ್ನೆಲೆ ಹಾಗೂ ಪ್ರಸ್ತುತ ಸ್ಥಿತಿ:–

ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯ ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯಲ್ಲಿ (ವಿಸ್ತೀರ್ಣ 621.59 ಹೆಕ್ಟರ್) ಅರಣ್ಯ ಇಲಾಖೆಯಿಂದ ಪರವಾನಿಗೆ ಪಡೆದ 136.97 ಹೆಕ್ಟರ್ ಪ್ರದೇಶದಲ್ಲಿ 1999ರಿಂದಲೂ ಮೈಸೂರು ಮಿನರಲಲ್ಸ್ ಲಿ. ಮತ್ತು ಮೆ: ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿ ರವರ ಜಂಟಿ ಉದ್ಯಮ ಸಂಸ್ಥೆಯಾದ ಮೆ: ವಿಜಯನಗರ ಮಿನರಲ್ಸ್ ಪ್ರೈ.ಲಿ. ಕಂಪನಿಯು ಎಂ.ಎಂ.ಎಲ್. ಸಂಸ್ಥೆಯ ಶಾಸನ ಬದ್ದ ಮೇಲ್ವಿಚಾರಣೆಯೊಂದಿಗೆ ಗಣಿಗಾರಿಕೆಯನ್ನು ನಡೆಸಲಾಗುತ್ತಿದೆ.

### ಒಡಂಬಡಿಕೆ (MOU)

ಮೈಸೂರು ಮಿನರಲ್ಸ್ ಸಂಸ್ಥೆ ಮತ್ತು ಮೆ: ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿ. ಸಂಸ್ಥೆ (ಹಿಂದಿನ ಮೆ:ಜೆ.ವಿ.ಎಸ್.ಎಲ್) ರವರು ದಿನಾಂಕ:17.01.1997ರಂದು ಒಂದು ಒಡಂಬಡಿಕೆ (MOU) ಪತ್ರಕ್ಕೆ ಸಹಿ ಮಾಡಿಕೊಳ್ಳಲಾಗಿದೆ. (ಅನುಬಂಧ–1) ಮತ್ತು ಜಂಟಿ ಸಮೂಹ ಸಂಸ್ಥೆಯು 17.06.1997ರಂದು ಸಂಘಟನೆಗೊಂಡು 27.11.1999ರಿಂದ ಗಣಿಗಾರಿಕೆಯನ್ನು ನಡೆಸಲಾಗುತ್ತಿದೆ.

### ಒಡಂಬಡಿಕೆಯ ಪ್ರಮುಖ ಅಂಶಗಳು:–

ಮೈಸೂರು ಮಿನರಲ್ಸ್ ಸಂಸ್ಥೆ ಮತ್ತು ಮೆ.ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿ. ಸಂಸ್ಥೆ ಈ ಎರಡು ಸಂಸ್ಥೆಗಳು ತಮ್ಮ ತಮ್ಮ ಪಾಲಿನ ಗಣಿಗಳನ್ನು ಜಂಟಿ ಸಮೂಹ ಸಂಸ್ಥೆಯ (ವಿ.ಎಂ.ಪಿ.ಎಲ್) ಅಡಿಯಲ್ಲಿ ಗಣಿಗಾರಿಕೆಗಾಗಿ ತರಬೇಕಾಗಿರುತ್ತದೆ ಆದರೆ ಇಂದಿನವರೆಗೂ ಮೆ: ಜೆ.ಎಸ್.ಡಬ್ಲ್ಯೂ ಸಂಸ್ಥೆಯವರು ತಮ್ಮ ಪಾಲಿನ ಗಣಿಯನ್ನು ಜಜೆ.ವಿ. ಕಂಪನಿಯ ಅಡಿಗೆ ತರದೆ ಮೈಸೂರು ಮಿನರಲ್ಸ್ ಸಂಸ್ಥೆಯ ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯೊಂದರಲ್ಲೇ ಗಣಿಗಾರಿಕೆ ನಡೆಸಲಾಗುತ್ತಿದೆ.

ಒಡಂಬಡಿಕೆಯನ್ವಯ "ಪಾಲುದಾರಿಕೆಯ ವಾಣಿಜ್ಯ ಆಧಾರದ" ಮೇಲಿದ್ದರೂ ಸಹ ಕಬ್ಬಿಣದ ಅದಿರು ಪುಡಿಯನ್ನು ಮೆ: ಜೆ.ಎಸ್.ಡಬ್ಲ್ಯೂ ಸಂಸ್ಥೆಯವರಿಗೆ ವರ್ಗಾವಣೆ ದರ (ಉತ್ಪಾದನಾ ವೆಚ್ಚದ ಆಧಾರಿತ) ಹಾಗೂ ಮಾರುಕಟ್ಟೆ ದರದ ಶೇಕಡ 6% ಅಧಿ ಮೌಲ್ಯಯೊಂದಿಗೆ (Premium) ಸರಬರಾಜು ಮಾಡಬೇಕಾಗಿರುತ್ತದೆ. ಜಂಟಿ ವಲಯ ಕಂಪನಿಯಲ್ಲಿ ಜೆ.ಎಸ್.ಡಬ್ಲ್ಯೂ.ಎಲ್. ರವರು ಶೇಕಟ 70% ರಷ್ಟು ಪಾಲುಹೊಂದಿದ್ದು ಮತ್ತು ಎಂ.ಎಂ.ಎಲ್ ಸಂಸ್ಥೆಯು 30% ರಷ್ಟು ಪಾಲನ್ನು ಹೊಂದಿರುತ್ತದೆ. ಈ ಸಂಬಂಧದಲ್ಲಿ "ಷೇರುದಾರರ ಕರಾರು ಪತ್ರ"ವನ್ನು ಜಾರಿಗೊಳಿಸಬೇಕಾಗಿರುತ್ತದೆ.

ಒಡಂಬಡಿಕೆಯನ್ನು ಕಾರ್ಯಗತಗೊಳಿಸುವಿಕೆ:–

ಕಳೆದ 11 ವರ್ಷಗಳಿಂದ ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯಲ್ಲಿ ಗಣಿಗಾರಿಕೆ ನಡೆಸಿ 9.25 ಮಿಲಿಯನ್ ಟನ್ ಕಬ್ಬಿಣದ ಅದಿರು ಪುಡಿಯನ್ನು ಉತ್ಪಾದಿಸಿ ಕಡಿಮೆ ಅಧಿಮೌಲ್ಯ ಶೇಕಡ 6% ಪ್ರಿಮೀಯಂ 2000–01 ರಿಂದ 2009–10ರ ವರೆಗೆ ಕೇವಲ ರೂ.62.90 ಕೋಟಿ ಅಧಿಮೌಲ್ಯವಾಗಿ ಪಡೆದುಕೊಂಡು ಜೆ.ಎಸ್.ಡಬ್ಲ್ಯೂ ಸಂಸ್ಥೆಯವರಿಗೆ ಸರಬರಾಜು ಮಾಡಲಾಗಿರುತ್ತದೆ. 1997ರಲ್ಲಿ ಮಾಡಿಕೊಂಡ ಈ ದೋಷಪೂರಿತ ಒಡಂಬಡಿಕೆಯಿಂದಾಗಿ ಎಂ.ಎಂ.ಎಲ್ ಸಂಸ್ಥೆಗೆ 1997ರಿಂದ 2007–08ವರೆಗೆ ಸುಮಾರು ರೂ.917.31 ಕೋಟಿ ಮೌಲ್ಯ ಗಳಿಕೆಯಲ್ಲಿ ಹಾನಿ ಉಂಟಾಗಿದೆ.

## 2000 ದಿಂದ 2007–08ವರೆಗೆ ಹಿಂದಿನ ಮುಖ್ಯಮಂತ್ರಿಗಳ ಕಾಲದಲ್ಲಿ ಉಂಟಾದ ನಷ್ಟದ ವಿವರ

| ಕ್ರಮ ಸಂಖ್ಯೆ | ವರ್ಷ | ಮುಖ್ಯಮಂತ್ರಿ | ಅದಿರು | ನಷ್ಟದ ಅಂದಾಜು |
|---|---|---|---|---|
| 1 | 2000–2004 | ಎಸ್.ಎಂ.ಕೃಷ್ಣ | 22.63 | 19.82 |
| 2 | 2004–06 | ಎನ್.ಧರಂ ಸಿಂಗ್ | 19.65 | 154.83 |
| 3 | 2006–07 (ಅಕ್ಟೋಬರ್) | ಹೆಚ್.ಡಿ.ಕುಮಾರಸ್ವಾಮಿ | 16.95 | 237.28 |
| 4 | 2007–08 (ಮೇ) | ರಾಜ್ಯಪಾಲರ ಆಡಳಿತ | 6.84 | 134.35 |
| | ಒಟ್ಟು | | 66.07 | 546.28 |

ಷರಾ:

10 ವರ್ಷದಲ್ಲಿ 1997ರಿಂದ 2007–08ವರೆಗೆ ರೂ.915ಕೋಟಿ ನಷ್ಟದಲ್ಲಿತ್ತು. 2008–09ರಿಂದ 2011ವರೆಗೆ (ಬಿ.ಎಸ್.ಯಡಿಯೂರಪ್ಪನವರ ಅವಧಿಯಲ್ಲಿ) ಅದೇ ಎಂ.ಎಂ.ಎಲ್ ಸುಮಾರು ರೂ.400 ಕೋಟಿ ಆದಾಯ ಗಳಿಸಿದೆ.

## ಶ್ರೀ ಬಿ.ಎಸ್.ಯಡಿಯೂರಪ್ಪ ಸರ್ಕಾರ ಎಂ.ಎಂ.ಎಲ್ ಸಂಸ್ಥೆ ಉಳಿವಿಗೆ ತೆಗೆದುಕೊಂಡ ಕ್ರಮಗಳು

- ವಿವಿಧ ಬಾಬ್ತುಗಳಿಗೆ ಸಂಬಂಧಿಸಿದ ರೂ.49.78 ಕೋಟಿ ಬಾಕಿಯನ್ನು ವಸೂಲಿ ಮಾಡಲಾಗಿದೆ.
- ಮೆ: ಜೆ.ಎಸ್.ಡಬ್ಲ್ಯೂ.ಎಸ್.ಎಲ್ ರವರು ಹಾಕಿದ್ದ ರಿಟ್ ಪಿಟಿಷನ್ ನಂ.6882/2008ರಲ್ಲಿ ನೀಡಲಾದ ತಾತ್ಕಾಲಿಕ ತಡೆಯಾಜ್ಞೆಯನ್ನು ತೆರವುಗೊಳಿಸಿದ್ದು, ನಂತರ ದಿನಾಂಕ:05.09.2009ರಂದು ಈ ದಾವೆಯನ್ನು ಅಂತಿಮವಾಗಿ ವಜಾಗೊಳಿಸಲಾಗಿದೆ.
- ಎಂ.ಎಂ.ಎಲ್ ಸಂಸ್ಥೆಯ ಆರ್ಥಿಕ ಹಿತವನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕೃತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸರ್ಕಾರವು ತನ್ನ ಪತ್ರ ಸಂಖ್ಯೆ ಸಿಐ/37/ಸಿಎಂಸಿ/2007 ದಿನಾಂಕ: 17.03.2010 ರಲ್ಲಿ ಅನುಮೋದನೆ ನೀಡಲಾಗಿದೆ. ಅದರಂತೆ ಈ ಹಿಂದೆ ಎಂ.ಎಂ.ಎಲ್ ಸಂಸ್ಥೆಯು ಪಡೆಯುತ್ತಿದ್ದ ಕೇವಲ 6% ಅಧಿಮೌಲ್ಯದ ಬದಲಾಗಿ ಸರಬರಾಜು ಮಾಡಿದ ಅದಿರಿನ ಪುಡಿಗೆ ಮಾರುಕಟ್ಟೆ ಬೆಲೆಯ ಶೇಕಡ 100 ರಷ್ಟು ಕ್ಯಾಲಿಬ್ರೇಟೆಡ್ ಅದಿರನ್ನು ಸಹ ಎಂ.ಎಂ.ಎಲ್ ವತಿಯಿಂದಲೇ ಪ್ರಚಲಿತ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

## <u>ಸರ್ಕಾರದ ನಿರ್ಧಾರವನ್ನು ಅಳವಡಿಸಿದ್ದರಿಂದ ದಿನಾಂಕ:01.04.2010 ರಿಂದ ಉಂಟಾದ ಧನಾತ್ಮಕ ಪರಿಣಾಮಗಳು</u>

ದಿನಾಂಕ: 01.04.2010ರಿಂದ ಉತ್ಪಾದಿಸಲಾಗಿರುವ ಕಬ್ಬಿಣದ ಅದಿರಿನ ಪುಡಿಗೆ ಅದಿರಿನ ಅಧಿಮೌಲ್ಯವನ್ನು ಶೇ.6 ರಿಂದ ಶೇ.50 ರವರೆಗೆ ಹೆಚ್ಚಳ ಮಾಢಲಾಗಿರುತ್ತದೆ. ಈ ಹೆಚ್ಚಳದಿಂದ ಎಂ.ಎಂ.ಎಲ್ ಸಂಸ್ಥೆಯು 2010.11ನೇ ಸಾಲಿನ 11 ತಿಂಗಳ ಅವಧಿಯಲ್ಲಿ ಅಂದರೆ, ಏಪ್ರಿಲ್ 2010ರಿಂದ ಫೆಬ್ರವರಿ 2011ರ ಅವಧಿಯಲ್ಲಿ ರೂ.197.14 ಕೋಟಿ ಆಧಾಯವನ್ನು ಗಳಿಸಿರುತ್ತದೆ. ಈ ಆದಾಯವು 2009-10ನೇ ಪೂರ್ಣ ಸಾಲಿನಲ್ಲಿ (ಏಪ್ರಿಲ್-2009ರಿಂದ ಮಾರ್ಚ್ 2010ವರೆಗೆ) ಕೇವಲ ರೂ.11.29 ಕೋಟಿಗಳಾಗಿತ್ತು.

ಎಂ.ಎಂ.ಎಲ್ ಸಂಸ್ಥೆಯು 2010-11ನೇ ಸಾಲಿನ 11 ತಿಂಗಳ (ಏಪ್ರಿಲ್ - ಫೆಬ್ರವರಿ 2011) ಅವಧಿಯಲ್ಲಿ 4,14,986 ಟನ್ ಪ್ರಮಾಣದ ಕಬ್ಬಿಣದ ಅದಿರಿನ ಉಂಡೆಗಳನ್ನು ಮಾರಾಟ ಮಾಡಿ ರೂ.74.22 ಕೊಟಿ ಆದಾಯವನ್ನು ಸಹ ಗಳಿಸಿರುತ್ತದೆ.

ಸಂಸ್ಥೆಯು ತಿಮ್ಮಪ್ಪನಗುಡಿ ಕಬ್ಬಿಣ ಅದಿರು ಗಣಿಯಿಂದ 2010-11ನೇ ಸಾಲಿನಲ್ಲಿ (ಏಪ್ರಿಲ್-2010ರಿಂದ ಮಾರ್ಚ್ 2011 ರವರೆಗೆ) ರೂ.250 ಕೋಟಿಗಳಷ್ಟು ಆದಾಯವನ್ನು ಅದಿರುಪುಡಿ ಮಾರಾಟದಿಂದ (ಪ್ರೀಮಿಯಂ) ನಿರೀಕ್ಷಿಸಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರವು ಆಡಳಿತವನ್ನು ವಹಿಸಿಕೊಂಡ ನಂತರ ತೆಗೆದುಕೊಂಡ ಕಠಿಣ ನಿರ್ಧಾರಗಳಿಂದ ಮೆ: ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿ.ಸಂಸ್ಥೆಯು ಮೆ: ಮೈಸೂರು ಮಿನರಲ್ಸ್ ಲಿ. ಸಂಸ್ಥೆಯ ಕಬ್ಬಿಣದ ಅದಿರಿನ ಸಂಪನ್ಮೂಲಕ್ಕೆ ಮಾಡುತ್ತದ್ದ ಆರ್ಥಿಕ ಶೋಷಣೆಯನ್ನು ಕೊನೆಗಾಣಿಸಿ ದೃಢ ನಿರ್ಧಾರದಿಂದ ಸರಬರಾಜಾದ ಅದಿರು ಪುಡಿಗೆ ಪಾವತಿಸಲಾಗುತ್ತಿದ್ದ ಅದಿಮೌಲ್ಯವನ್ನು 6% ರಿಂದ 50% ಹೆಚ್ಚಿಸಿದ್ದರಿಂದ ಅಭೂತಪೂರ್ವ ಆದಾಯ ಹೆಚ್ಚಳವಾಗಿದ್ದು, ರೂ.197.14 ಕೋಟಿಯನ್ನು 2010-11 ಮೊದಲ 11 ತಿಂಗಳ ಅವದಿಯಲ್ಲಿ ಗಳಿಸಲಾಗಿದೆ. ಅಂತಿಮವಾಗಿ 2010-11ರ ಸಾಲಿಗೆ ಒಟ್ಟು ರೂ.250 ಕೋಟಿ ಆದಾಯವನ್ನು ನಿರೀಕ್ಷಿಸಲಾಗಿದೆ.

<u>ಷರಾ:</u>

- **1997ರಿಂದ 2007-08 ಹತ್ತು ವರ್ಷದಲ್ಲಿ ಹಿಂದಿನ ಸರ್ಕಾರದ ತಪ್ಪು ಒಡಂಬಡಿಕೆಯಿಂದ 917 ಕೋಟಿ ನಷ್ಟವನ್ನು ಎಂ.ಎಂ.ಎಲ್ ಅನುಭವಿಸಲು ಹಿಂದಿನ ಸರ್ಕಾರದ ಅಧಿಕಾರದಲ್ಲಿದ್ದವರು ಉತ್ತರಿಸುವರೇ?**
- **ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಎರಡು ವರ್ಷದಲ್ಲಿ ಅದಿಮೌಲ್ಯ (ಪ್ರೀಮಿಯಂ)ನ್ನು 6% ನಿಂದ 50% ಹೆಚ್ಚಿಸಿರುವುದರಿಂದ ಎಂ.ಎಂ.ಎಲ್ ಸುಮಾರು 400 ಕೋಟಿ ಲಾಭವನ್ನು ಎಂ.ಎಂ.ಎಲ್ ಗಳಿಸಿರುವುದಕ್ಕೆ ಶ್ರೀ ಬಿ.ಎಸ್.ಯಡಿಯೂರಪ್ಪನವರ ದಿಟ್ಟ ನಿಲುವನ್ನು ಪ್ರಶಂಸಿರುವುದಿಲ್ಲವೇಕೆ.**
- **ವಾಸ್ತವಾಂಶ ಅರಿಯದೆ ಶ್ರೀ ಬಿ.ಎಸ್.ಯಡಿಯೂರಪ್ಪನವರು ಎಂ.ಎಂ.ಎಲ್‌ಗೆ ನಷ್ಟ ಮಾಡಿ ಜೆ.ಎಸ್.ಡಬ್ಲ್ಯೂಎಲ್ ನಿಂದ ಅವರ ಮಕ್ಕಳ ಟ್ರಸ್ಟ್‌ಗೆ ದೇಣಿಗೆ ಪಡೆದಿದ್ದಾರೆ ಎಂಬ ಅಪಾದನೆ ಮಾಡುವುದು ಅಂತಹವರ ಮೂರ್ಖತನವದ ಪರಮಾವಧಿಯಲ್ಲವೆ?**

## ದಿನಾಂಕ 27.7.2011 ರಂದು ಲೋಕಾಯುಕ್ತ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಸಂತೋಷ ಹೆಗಡೆಯವರು ಸಲ್ಲಿಸಿದ ವರದಿ ಕುರಿತಂತೆ:–

1. ದಿನಾಂಕ 27.7.2011 ರಂದು ಲೋಕಾಯುಕ್ತ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಸಂತೋಷ ಹೆಗಡೆ ಯವರು ಸಲ್ಲಿಸಿದ ವರದಿಯು ಕರ್ನಾಟಕ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ರಾಜೀನಾಮೆಗೆ ಕಾರಣವಾಯಿತು. ವರದಿಯ ಪೂರ್ವದಲ್ಲಿ ಕೆಲವರು ಲೋಕಾಯುಕ್ತರಿಂದ ಆಪಾದನೆಗೆ ಗುರಿಯಾಗಿದ್ದಾರೆಂಬ ಕಾರಣಕ್ಕಾಗಿ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಬೇಡಿಕೆಯಿಟ್ಟಿದ್ದರು.

2. ವರದಿಯಲ್ಲಿ 33 ಅಧ್ಯಾಯಗಳಿವೆ, ಮತ್ತು ಒಟ್ಟು 464 ಪುಟಗಳಿವೆ.

3. ವರದಿಯಲ್ಲಿರುವ ಅಸ್ಪಷ್ಟತೆಯನ್ನು ನಿವಾರಿಸಿ ಅದರಲ್ಲಿ ಹೆಚ್ಚಿನ ಸ್ಪಷ್ಟತೆಯನ್ನು ತರುವುದು ಇದರ ಉದ್ದೇಶ. ಲೋಕಾಯುಕ್ತ ವರದಿಯಲ್ಲಿ ಏನಾದರೂ ನಿಜವಿದೆಯೇ? ವರದಿಯಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ಮೇಲೆ ನಿಜವಾಗಿಯೂ ಆಪಾದನೆ ಇದೆಯೇ? ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ಅವಧಿಯಲ್ಲಿ ಗಣಿಗಾರಿಕೆಯ ಬಗ್ಗೆ ತೆಗೆದುಕೊಂಡ ನಿರ್ಧಾರಗಳು ಕಾನೂನು ಬಾಹಿರವೇ, ಅವರು ರಾಜೀನಾಮೆ ಕೊಡುವ ಅಗತ್ಯವಿತ್ತೆ?.

4. ಶ್ರೀ ಬಿ.ಎಸ್. ಯಡಿಯೂರಪ್ಪನವರ ರಾಜೀನಾಮೆಗೆ ಒತ್ತಾಯ ಮಾಡಿದ ಸಂದರ್ಭದಲ್ಲಿ ಯಾರೂ ಕೂಡ ವರದಿಯ ವಸ್ತು ಸ್ಥಿತಿ ಕುರಿತು ಅಧ್ಯಯನ ಮಾಡಲಿಲ್ಲ ಎಂಬುದು ವಿಷಾದನೀಯ. ಆದಕಾರಣ ವರದಿಯ ಸತ್ಯಾ ಸತ್ಯತೆಯ ಕುರಿತು ಒಂದು ಕಿರು ಅದ್ಯಯನ.

ಲೋಕಾಯುಕ್ತರು ಯಾವ ವಿಷಯ ಕುರಿತು ವಿಚಾರಣೆ ಮಾಡಲು ಕೇಳಲಾಗಿತ್ತು? ಅವರು ಮಾಡಿದ್ದೇನು?

ಲೋಕಾಯುಕ್ತರಿಗೆ ಅಕ್ರಮ ಗಣಿಗಾರಿಕೆ ಹಾಗೂ ತತ್ಸಂಬಂಧಿ ವಿಷಯಗಳ ಬಗೆಗಿನ ತನಿಖೆಯನ್ನು ವಹಿಸಲಾಗಿತ್ತು. ಅಕ್ರಮ ಗಣಿಗಾರಿಕೆ ಬಗ್ಗೆ ಕ್ರಮಕೈಗೊಳ್ಳುವಂತೆ ಕೋರಿ ದೂರುಗಳು ಬಹುಸಂಖ್ಯೆಯಲ್ಲಿ ಬಂದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಯಿತು. ಅಕ್ರಮ ಗಣಿಗಾರಿಕೆ ಎಂದರೆ ಲೈಸೆನ್ಸ್ ಇಲ್ಲದವರು ನಡೆಸುವ ಗಣಿಗಾರಿಕೆ, ಲೈಸೆನ್ಸ್‌ಧಾರಕರು ಗುತ್ತಿಗೆ ನೀಡಿದ ಪ್ರದೇಶದ ಗಡಿ ಮೀರಿ ನಡೆಸುವ ಗಣಿಗಾರಿಕೆ ಮತ್ತು ಊರ್ಜಿತ ಪರ್ಮಿಟ್ ಇಲ್ಲದೇ ಕಬ್ಬಿಣದ ಅದಿರು ಸಾಗಿಸುವ ವ್ಯವಹಾರ, ರಾಯಲ್ಟಿ ಹಣದ ಸೋರಿಕೆ.

ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸ್ವತ: ತಾವಾಗಿಯೇ ವಿಧಾನಸಭೆಯಲ್ಲಿ ಮುಂದೆಬಂದು ಅಕ್ರಮ ಗಣಿಗಾರಿಕೆ ವಿಚಾರಣೆಯನ್ನು 2000 ದಿಂದ ತನ್ನ ಅವಧಿಯಂದರೆ 20.07.2010ವರೆಗೆ ಲೋಕಾಯುಕ್ತಗೆ ವಹಿಸುವುದಾಗಿ ಘೋಷಿಸಿದರು, ಅದು ಅವರ ದಿಟ್ಟತನವನ್ನು ತೋರುತ್ತದೆ.

1. ಸರ್ಕಾರಿ ಆದೇಶ ಸಂಖ್ಯೆ ಎಫ್‌ಇಇ 21/ಎಫ್‌ಡಿಇ–2005, ದಿನಾಂಕ 23.06.2006.
2. ಸರ್ಕಾರಿ ಆದೇಶ ಸಂಖ್ಯೆ. ಸಿಐ 164/ಎಂಎಂಎಂ/2006 ದಿನಾಂಕ 22.07.2006 ತಿದ್ದೋಲೆ ದಿನಾಂಕ: 24.07.2006.
3. ಸರ್ಕಾರಿ ಆದೇಶ ಸಂಖ್ಯೆ ಸಿಐ 164/ಎಂಎಂಎಂ/2006 ದಿನಾಂಕ 12.03.2007.
4. ಸರ್ಕಾರಿ ಆದೇಶ ಸಂಖ್ಯೆ ಸಿಐ 164/ಎಂಎಂಎಂ/2006 (ಭಾಗ) ದಿನಾಂಕ 09.09.2008.
5. ಸರ್ಕಾರಿ ಆದೇಶ ಸಂಖ್ಯೆ ಸಿಐ 164/ಎಂಎಂಎಂ/2006 ದಿನಾಂಕ 24.12.2008.

ಪರಿಶೀಲನಾಂಶವೆಂದರೆ, 2003ರಲ್ಲಿ, ಆಗ ಇದ್ದ ರಾಜ್ಯ ಸರ್ಕಾರವು, ಮುಂಚೆ ರಾಜ್ಯ ಒಡೆತನದ ಗಣಿಕಂಪನಿಗಳು ನಡೆಸಬೇಕಿದ್ದ ಗಣಿಗಾರಿಕೆಯ 700 ಹೆಕ್ಟೇರುಗಳಷ್ಟು ಪ್ರಮುಖ ಗಣಿಪ್ರದೇಶವನ್ನು ಹಿಂದಕ್ಕೆ ಪಡೆದದ್ದು ಸರಿಯೇ ಎಂಬುದು.

### ವಿಚಾರಣೆ ನಡೆಸದೇ ತಳ್ಳಿಹಾಕಲಾಯಿತು

ವೇದ ಉಪನಿಷತ್ತುಗಳ ಸಾರವೆಂದು ಪರಿಗಣಿಸಲಾಗುವ ಶ್ರೀಮದ್ ಭಗವದ್ಗೀತೆಯ 55ನೇ ಅಧ್ಯಾಯದ 34ನೇ ಶ್ಲೋಕವು ಈ ಮುಂದಿನಂತಿದೆ:

"ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇವ್ಯಯಾಮ್,

ಸಂಭಾವಿತಸ್ಯ ಚಾಕೀರ್ತಿ ಮರಣಾದತಿರಿಚ್ಯತೇ"

ಜನರೂ ಸಹ ನಿನ್ನ ಹೇಡಿತನವನ್ನು ಎಂದೆಂದಿಗೂ ನೆನೆಯುವರು

ಮರ್ಯಾದಸ್ಥನಿಗೆ ಅವಮರ್ಯಾದೆಯು ಸಾವಿಗಿಂತ ಹೆಚ್ಚಿನದು.

ಮೇಲಿನ ಶ್ಲೋಕವನ್ನು ವ್ಯಾಖ್ಯಾನಿಸುತ್ತ ಮಹರ್ಷಿ ಮಹೇಶ್ ಯೋಗಿ ಮುಂದಿನಂತೆ ಹೇಳಿದ್ದಾರೆ: ಸಮಾಜದಲ್ಲಿ ವಿಶ್ವಾಸ ಹಾಗೂ ಕೀರ್ತಿಗೆ ಪಾತ್ರರಾದವರು ಅದನ್ನು ಕಳೆದುಕೊಂಡರೆ ಅವಮಾನ-ದುಃಖವನ್ನು ಅನುಭವಿಸುತ್ತಾರೆ. ಅದು ಮರಣಕ್ಕಿಂತಲೂ ಹೀನಾಯವಾದುದು. ಪ್ರಸಿದ್ಧನಾದ ವ್ಯಕ್ತಿ ಕೀರ್ತಿಹೀನನಾದರೆ, ಅದು ಅವನಿಗೆ ಮರಣಕ್ಕಿಂತ ಹೆಚ್ಚಿನದು. ಸಮಾಜದಲ್ಲಿ ಕೀರ್ತಿಗೆ ಪಾತ್ರನಾಗಿರುವುದರ ಹಿಂದಿನ ತತ್ವವೇನೆಂದರೆ ಒಬ್ಬ ವ್ಯಕ್ತಿ ಯಾವಾಗಲೂ ಒಳಿತನ್ನೇ ಮಾಡುತ್ತಿದ್ದರೆ, ಅವನು ಸದ್ಭಾವನೆಯ ಕೇಂದ್ರ ಬಿಂದುವೆನಿಸುತ್ತಾನೆ. ಅವನ ಸುತ್ತಲಿನವರು ಸಹಜವಾಗಿಯೇ ಅದರ ಪ್ರಭಾವಕ್ಕೊಳಗಾಗಿ ಆನಂದ ಹೊಂದುತ್ತಾರೆ. ತತ್ಪರಿಣಾಮವಾಗಿ ಸಹಜವಾಗಿಯೇ ಆ ವ್ಯಕ್ತಿಯ ಬಗ್ಗೆ ಅವರು ಆದರ ಹಾಗೂ ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. ಅದರಿಂದಾಗಿಯೇ ಆತನನ್ನು ಎಲ್ಲರೂ ಕೊಂಡಾಡುತ್ತಾರೆ.

ಹೀಗೆ ಒಬ್ಬ ವ್ಯಕ್ತಿಯ ಕೀರ್ತಿ ಅವನ ಸಜ್ಜನಿಕೆಯ ಮಾನದಂಡವಾದರೆ, ಅಪಕೀರ್ತಿ ಅವನು ದುರ್ಜನನೆಂದು ಸೂಚಿಸುತ್ತದೆ. ಒಳ್ಳೆಯವನು ಅಪಕೀರ್ತಿ ಪಡೆಯುವ ಸಾಧ್ಯತೆ ಇರುವುದಿಲ್ಲ. ಭಗವದ್ಗೀತೆಯಲ್ಲಿರುವ ಮೇಲಿನ ಶಬ್ದಗಳನ್ನು ವ್ಯಾಖ್ಯಾನಿಸುತ್ತಾ ಮ್ಯಾಕ್ಸ್ ಮುಲ್ಲರ್ ಮುಂದಿನಂತೆ ಹೇಳುತ್ತಾರೆ: ಎಲ್ಲರೂ ನಿನ್ನ ಅಪಕೀರ್ತಿಯ ಬಗ್ಗೆ ಹೇಳುತ್ತಾರೆ. ಒಮ್ಮೆ ಕೀರ್ತಿಗೆ ಪಾತ್ರನಾದವನಿಗೆ ಅಪಕೀರ್ತಿ ಮರಣಕ್ಕಿಂತಲೂ ಹೆಚ್ಚಿನದು".

ಕರ್ನಾಟಕ ಲೋಕಾಯುಕ್ತ ಕಾನೂನಿನ ಅಡಿಯಲ್ಲಿ ಲೋಕಾಯುಕ್ತರು ಪರಿಶೀಲನಾಂಶಗಳ ಮೇರೆಗೆ ವಿಚಾರಣೆ ನಡೆಸಿ ವರದಿ ನೀಡಬೇಕಾಗುತ್ತದೆ.

## ಕನಿಷ್ಠ ಸ್ವಾಭಾವಿಕ ನ್ಯಾಯ ಕೊಡುವ ಸೌಜನ್ಯವನ್ನು ಲೋಕಾಯುಕ್ತರು ತೋರಿಲ್ಲ

ನ್ಯಾಯಶಾಸ್ತ್ರದ ಮೂಲಭೂತ ತತ್ವವೆಂದರೆ ಪ್ರತಿಕೂಲ ಕ್ರಮ ಕೈಗೊಳ್ಳಬೇಕಾದರೆ ಅಥವಾ ಪ್ರತಿಕೂಲ ಅಭಿಪ್ರಾಯ ನೀಡುವುದಾದರೆ, ಹಾಗೆ ಏಕೆ ಅಂಥ ಅಭಿಪ್ರಾಯ ನೀಡಬಾರದು ಎಂಬ ಬಗ್ಗೆ ವಿವರಣೆ ನೀಡಲು ವ್ಯಕ್ತಿಗೆ ಅವಕಾಶ ನೀಡಬೇಕಾದುದು ಕನಿಷ್ಠ ಅಗತ್ಯವಾಗುತ್ತದೆ.

ಒಬ್ಬ ನಾಲ್ಕನೇ ದರ್ಜೆ ಉದ್ಯೋಗಿಯ ಸೇವಾ ಪುಸ್ತಕದಲ್ಲಿ ರಹಸ್ಯ ಅಭಿಪ್ರಾಯ ದಾಖಲಿಸಬೇಕಾದರೆ, ಅಂತಹವರಿಗೆ ನೋಟೀಸು ನೀಡಬೇಕಾದುದು ಅಗತ್ಯ. ಆದರೆ ಇಲ್ಲಿ ಇಡೀ ರಾಜ್ಯದಲ್ಲಿ ಜನಪ್ರಿಯರಾದ, ರಾಜ್ಯದ ಮುಖ್ಯಮಂತ್ರಿಯನ್ನು ಆಪಾದನೆಗೆ ಗುರಿಮಾಡಿ, ತಪ್ಪಿತಸ್ಥನೆಂದು ಪರಿಗಣಿಸಲಾಯಿತು. ಲೋಕಾಯುಕ್ತರು ಅವರಿಗೆ ಕೊಡಬೇಕಿದ್ದ ಕನಿಷ್ಠ ನೋಟೀಸನ್ನು ಕೊಡದಿರುವ ಮೂಲಕ ಅಹವಾಲು ಹೇಳಿಕೊಳ್ಳಲು ಅವಕಾಶವನ್ನೂ ನೀಡಲಿಲ್ಲ. ಇದನ್ನು ಅವರ ಅರಿವಿಗೇ ತರಲಿಲ್ಲ. ಅವರನ್ನು ಹಿಂದಿನಿಂದ ತಿವಿಯುವ ಉದ್ದೇಶದಿಂದಲೇ ವಿಷಯ ಅವರ ಅರಿವಿಗೆ ಬಾರದಂತೆ ನೋಡಿಕೊಳ್ಳಲಾಯಿತು. ಇದು ಬಹಳ ದುರದೃಷ್ಟಕರ. ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳ ಹಲವು ತೀರ್ಪುಗಳ ದೃಷ್ಟಿಯಿಂದ ಮೇಲ್ನೋಟಕ್ಕೆ ಅಕ್ರಮವೆನಿಸುವ ಇಂಥ ವರದಿ ಮುಖ್ಯಮಂತ್ರಿಯನ್ನು ತೆಗೆದುಹಾಕಲು ಆಧಾರವಾಗುತ್ತದೆಯೇ? ಇಲ್ಲಿ ಅಪ್ರಸ್ತುತ ಉಲ್ಲೇಖವೆನಿಸಿದರೂ, ಮಾನ್ಯ ಉಚ್ಚನ್ಯಾಯಾಲಯವು ಪ್ರೊ. ಎಸ್.ಎನ್. ಹೆಗಡೆ ಮತ್ತು ಇನ್ನೊಬ್ಬರು – ವಿ – ಲೋಕಾಯುಕ್ತ ಬೆಂಗಳೂರು ಮತ್ತು ಇತರರು (ಐಎಲ್‌ಆರ್ 2004, ಕರ್ನಾಟಕ) ಪ್ರಕರಣದಲ್ಲಿ, 'ಲೋಕಾಯುಕ್ತ, ತನಿಖೆ ಮಾಡುವಾಗ ಅಪರಾಧಿಗೆ ನೋಟೀಸು ನೀಡಬೇಕಾದುದು ಕಡ್ಡಾಯವಾಗಿರುತ್ತದೆ. ಹಾಗೆ ನೋಟೀಸು ನೀಡದಿದ್ದರೆ ಇಡೀ ವರದಿ ಅಕೃತ ಹಾಗೂ ಶೂನ್ಯವೆಂದು ಘೋಷಿತವಾಗಲು ಬದ್ಧವಾಗಿರುತ್ತದೆ' ಎಂದು ಅಭಿಪ್ರಾಯಪಟ್ಟಿತು. ಈ ಆದೇಶದ ವಿರುದ್ಧ ಮೇಲ್ಮನವಿ ದಾಖಲಿಸಿದಾಗ ಲೋಕಾಯುಕ್ತರೇ ಉಚ್ಚನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ 'ತನಿಖೆ ನಡೆಸಿದ ರೀತಿ ದೋಷಪೂರ್ಣವಾಗಿತ್ತು' ಎಂದು ಒಪ್ಪಿಕೊಂಡರು. ಕಾನೂನು ಹೀಗಿರುವಾಗ ಲೋಕಾಯುಕ್ತರು ನೋಟೀಸು ನೀಡದೆ ವರದಿ ಸಲ್ಲಿಸಿ ತಪ್ಪು ಮಾಡಿರುವರೇ? ಆದ್ದರಿಂದ ಅಂಥ ವರದಿ ಇದಕ್ಕೆ ಆಧಾರವೇ?

- ಅಲ್ಲದೇ ಮೊದಲನೇ ವರದಿ ಸಲ್ಲಿಸುವಾಗ, ಶ್ರೀ ಧರ್ಮಸಿಂಗ್ ವಿರುದ್ಧ ಆರೋಪ ಮಾಡಲಾಗಿದ್ದು ಅವರಿಗೆ ನೋಟೀಸು ನೀಡಿ ವಿವರಣೆ ಪಡೆಯಲಾಗಿತ್ತು.

- ಹಿರಿಯ ಐಪಿಎಸ್ ಅಧಿಕಾರಿ ಶ್ರೀಮತಿ. ಜೀಜಾ ಹರಿಸಿಂಗ್ ಅವರಿಗೂ ಅಂಥ ನೋಟೀಸು ನೀಡಲಾಗಿತ್ತು

- ಆದರೆ ಶ್ರೀ ಬಿ.ಎಸ್. ಯಡಿಯೂರಪ್ಪನವರ ಬಗ್ಗೆ ಇಂಥ ಅಸಮ್ಮತ ನಿಲುವು ಏಕೆ ತಳೆಯಲಾಯಿತು ಎಂಬುದೇ ವಿಚಿತ್ರ. ಕನಿಷ್ಠ ಸ್ವಬಾವಿಕ ನ್ಯಾಯವನ್ನು ಲೋಕಾಯುಕ್ತರು ತೋರದಿರಲು ಕಾರಣವೇನು ಎಂಬುದನ್ನು ಅವರು ಉತ್ತರಿಸುವರೆ? ಇದು ನಿವೃತ್ತ ಸರ್ವೋಚ್ಚನ್ಯಾಯಾದೀಶರು ನೀಡುವ ನ್ಯಾಯವೇ?

## ಶ್ರೀ ಸಂತೋಷ ಹೆಗಡೆಯವರ ವರದಿಯಲ್ಲಿನ ಪ್ರಮುಖವಾದ ಎರಡು ಆರೋಪಗಳು

### ಶ್ರೀ ಬಿ.ಎಸ್.ಯಡಿಯೂರಪ್ಪ ರವರ ಕುಟುಂಬದ ಸದಸ್ಯರು ಟ್ರಸ್ಟ್‌ಗಳಾಗಿರುವ ಪ್ರೇರಣ ಎಜುಕೇಷನ್ಸ್ ಹಾಗೂ ಸೋಷಿಯಲ್ ಟ್ರಸ್ಟ್‌ಗೆ ದೇಣಿಗೆ ಪಡೆದಿರುವ ಬಗ್ಗೆ ವಿವರಣೆ

ಪಿ.ಇ.ಎಸ್. ಟ್ರಸ್ಟ್ 10 ಕೋಟಿ ರೂಪಾಯಿಗಳನ್ನು ದೇಣಿಗೆ ಪಡೆದಿರುವ ಬಗ್ಗೆ ಶ್ರೀ ಯಡಿಯೂರಪ್ಪನವರ ಕುಟುಂಬ ಪಿ.ಇ.ಎಸ್ ಯಂತಹ ವಿದ್ಯಾಸಂಸ್ಥೆಯನ್ನು ಬೆಂಗಳೂರು ಅಥವಾ ದೇಶದ ಬೇರಾವುದೇ ಮಹಾನಗರಗಳಲ್ಲಿ ಸ್ಥಾಪಿಸಬಹುದಿತ್ತು.

- ಸರ್ಕಾರದ ಹೊರೆಯನ್ನು ಬಹುಮಟ್ಟಿಗೆ ತಗ್ಗಿಸಿ ಉತ್ತಮ ಶಿಕ್ಷಣವನ್ನು ರಾಜ್ಯದೆಲ್ಲಡೆ ಪಸರಿಸುತ್ತಿರುವಲ್ಲಿ ಖಾಸಗಿ ವಿದ್ಯಾಸಂಸ್ಥೆಗಳ ಪಾತ್ರ ಮಹತ್ವದ್ದು.

- 1995ರಿಂದ ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿರುವ ಅನುಭವ ಹೊಂದಿರುವ ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ಕುಟುಂಬದ ಸದಸ್ಯರು ಶಿವಮೊಗ್ಗದಲ್ಲಿಯೂ ಕೂಡ ಮಲೆನಾಡಿನ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕೆಂದು ಖ್ಯಾತ ಶಿಕ್ಷಣ ತಜ್ಞ,ಪ್ರೋ: ಎಂ.ಆರ್.ದೊರೆಸ್ವಾಮಿ ಯವರ ಮಾರ್ಗದರ್ಶನದಲ್ಲಿ ಪಿ.ಇ.ಎಸ್ ಸಂಸ್ಥೆ ನಡೆಸುತ್ತಿರುವುದು ಅಪರಾಧವೇ?

- ಕುಟುಂಬದವರಿಗೆ ಹಣ ಗಳಿಸುವ ಉದ್ದೇಶವಿದ್ದರೆ ಇಂತಹ ಅತ್ಯುತ್ತಮ ಸೌಕರ್ಯ ಹೊಂದಿದ ಸಂಸ್ಥೆಗಳನ್ನು ಬೆಂಗಳೂರು ನಗರದಲ್ಲಿಯೇ ಸ್ಥಾಪಿಸಿಬಹುದಾಗಿತ್ತಲ್ಲವೆ?

- ಶಿಕಾರಿಪುರದಂತಹ ತಾಲ್ಲೂಕಿನಲ್ಲಿ ವಿದ್ಯಾಸಂಸ್ಥೆಗಳನ್ನು ನಡೆಸುವುದು ಶಿವಮೊಗ್ಗದಂತಹ ನಗರಕ್ಕೆ ಪಿ.ಇ.ಎಸ್ ಸಂಸ್ಥೆಯ ಮೂಲಕ ಪ್ರೋ: ದೊರೆಸ್ವಾಮಿಯವಂತಹ ಶಿಕ್ಷಣ ತಜ್ಞರನ್ನು ಪರಿಚಯಿಸುವುದು ಹಾಗೂ ಸಮಾಜ ಮುಖ್ಯ ಕಾರ್ಯಗಳನ್ನು ಬೇರೆ ಮುಖ್ಯಮಂತ್ರಿಗಳೂ ಅವರವರ ಜಿಲ್ಲೆಯಲ್ಲಿ ಇದುವರೆಗೂ ಮಾಡಿದ್ದರೆ ಕರ್ನಾಟಕದ ಚಿತ್ರವೇ ಬೇರೆಯಾಗುತ್ತಿರಲಿಲ್ಲವೆ?

- ದೇಣಿಗೆಗಳ ಮೂಲಕ ಟ್ರಸ್ಟ್‌ಗಳನ್ನು ನಡೆಸುತ್ತಿರುವವರಲ್ಲಿ ಅನೇಕ ರಾಜಕಾರಣಿಗಳಿಲ್ಲವೆ?

- ಸಮಾಜದ ಏಳಿಗೆಗಾಗಿ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಣ ಸೌಲಭ್ಯವನ್ನು ಕೊಡುವುದಕ್ಕಾಗಿ ಪ್ರಮಾಣಿಕವಾಗಿ ಸೇವೆ ಸಲ್ಲಿಸುತ್ತಿರುವ ಪ್ರೇರಣ ಎಜುಕೇಷನಲ್ ಹಾಗೂ ಸೋಷಿಯಲ್ಲ ಸಂಸ್ಥೆ, ಸೌತ್ ವೆಸ್ಟ್ ಮೈನಿಂಗ್ ನಿಂದ ಬಂದ 10 ಕೋಟಿ ದೇಣಿಗೆಯನ್ನು ಸಂಸ್ಥೆಗಳ ನಿರ್ಮಾಣಕ್ಕಾಗಿಯೇ ಬಳಸಿದ್ದರೂ ಅದು ಅಕ್ರಮ ದೇಣಿಗೆಯಾಗುತ್ತದೆಯೇ?

ಒಂದು ಎಕರೆ ಜಾಗವನ್ನು 20 ಕೋಟಿ ರೂಪಾಯಿಗಳಿಗೆ ಮಾರಿರುವುದನ್ನು ತಪ್ಪಾಗಿ ಗ್ರಹಿಸಿ ಅಪಾದನೆ ಮಾಡಲಾಗಿದೆ.

ಸೌತ್‌ವೆಸ್ಟ್ ಮೈನಿಂಗ್ ಕಂಪನಿಯ ಪ್ರಕರಣವೇನು? ಸೌತ್‌ವೆಸ್ಟ್ ಮೈನಿಂಗ್ ಕಂಪನಿ ಯಾವುದು, ವರದಿಯಲ್ಲಿ ತಿಳಿಸಲಾದ ವ್ಯವಹಾರವು ಮುಖ್ಯಮಂತ್ರಿಗೆ ಹೇಗೆ ಸಂಬಂಧಪಡುವುದಿಲ್ಲ ಎಂಬ ಕೆಲವು ಅಂಶಗಳನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ಲೋಕಾಯುಕ್ತರ ಪ್ರಕಾರ ಅಂಶಗಳು ಮುಂದಿನಂತಿವೆ:

- ಅಪರ ಕಾರ್ಯದರ್ಶಿ, ಗಣಿಗಳು, ಕರ್ನಾಟಕ ಸರ್ಕಾರ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ನಡೆಸಿದ ಗಣಿ ಗುತ್ತಿಗೆಗಳ ಮೇಲಿನ ಅರ್ಜಿಗಳ ವಿಚಾರಣಾ ವ್ಯವಹರಣೆಗಳು.

- ಸಂಡೂರು ತಾಲ್ಲೂಕು ದೋಣಿ ಮಲೈ ವಲಯದಲ್ಲಿ 188.28 ಹೆಕ್ಟೇರ್‌ಗಳಷ್ಟು ಜೆಎಸ್‌ಡಬ್ಲ್ಯು ಸ್ಟೀಲ್ಸ್ ನಿಯಮಿತದ ಪರವಾಗಿ ಶಿಫಾರಸು ಮಾಡಲಾಗಿದೆ.

- ಸಂಡೂರು ತಾಲ್ಲೂಕು ದೋಣಿಮಲೈ ವಲಯದಲ್ಲಿ 181.170 ಹೆಕ್ಟೇರುಗಳಷ್ಟು ಮೆ॥ ವಿಜಯನಗರ ಮಿನರಲ್ಸ್ ಪ್ರೈ. ನಿಯಮಿತದ ಪರವಾಗಿ ಶಿಫಾರಸು ಮಾಡಲಾಗಿದೆ.

- ಸಂಡೂರು ತಾಲ್ಲೂಕು ದೋಣಿಮಲೈ ವಲಯದಲ್ಲಿ 181.14 ಹೆಕ್ಟೇರ್‌ಗಳಷ್ಟು ಮೆ॥ ಸೌತ್ ವೆಸ್ಟ್ ಮೈನಿಂಗ್ ನಿಯಮಿತದ ಪರವಾಗಿ ಶಿಫಾರಸು ಮಾಡಲಾಗಿದೆ.

## ಶ್ರೀ ಬಿ.ಎಸ್.ಯಡಿಯೂರಪ್ಪನವರ ಪಾತ್ರ ಇಲ್ಲ

ಮೇಲಿನ ಮೂರು ಕಂಪನಿಗಳಿಗೂ ದಿನಾಂಕ 21.09.2007ರಂದು ಗಣಿಗುತ್ತಿಗೆ ಶಿಫಾರಸನ್ನು/ ಮಂಜೂರಾತಿಯನ್ನು ಶ್ರೀ ಹೆಚ್.ಡಿ ಕುಮಾರಸ್ವಾಮಿ, ಮುಖ್ಯಮಂತ್ರಿಗಳ ಅವಧಿಯಲ್ಲಿ ಮಾಡಲಾಗಿದೆ. ಶ್ರೀ ಬಿ.ಎಸ್.ಯಡಿಯೂರಪ್ಪನವರು ಈ ಗಣಿಗಾರಿಕೆಗೆ ಯಾವುದೇ ರೀತಿಯಲ್ಲೂ ಸಂಬಂಧ ಹೊಂದಿಲ್ಲ ಎಂಬ ಅಂಶವನ್ನು ಗಮನಿಸಬಹುದಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್ಸ್ ನಿಯಮಿತ ಮತ್ತು ಸೌತ್‌ವೆಸ್ಟ್ ಮೈನಿಂಗ್ ನಿಯಮಿತ ಇವರ ಜೊತೆಯಲ್ಲಿಯೇ ಗಣಿಗುತ್ತಿಗೆ ಮಂಜೂರಾತಿಗಾಗಿ ತಾವೂ ಸಹ ಅರ್ಜಿ ಸಲ್ಲಿಸಿದ್ದೆವು ಮತ್ತು ಶಿಫಾರಸು ಅಕ್ರಮವಾಗಿತ್ತು ಎಂಬ ಕಾರಣದ ಮೇಲೆ ಮೆ॥ ವಿ.ಎಸ್. ಲಾಡ್ ಅಂಡ್ ಸನ್ಸ್ ರಿಟ್ ಅರ್ಜಿ ಸಂಖ್ಯೆ 563/2008ನ್ನು ಸಲ್ಲಿಸುವ ಮೂಲಕ ಈ ಶಿಫಾರಸುಗಳನ್ನು ಪ್ರಶ್ನಿಸಿದ್ದರು.

ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 563/ 2008ರಲ್ಲಿ ಅರ್ಜಿದಾರರ (ಮೆ॥ ಲಾಡ್ ಅಂಡ್ ಸನ್ಸ್) ವಾದವನ್ನು ತಿರಸ್ಕರಿಸಿತು ಮತ್ತು ರಾಜ್ಯ ಸರ್ಕಾರವು ದಿನಾಂಕ 28.06.2009ರಂದು ಮಾಡಿದ ಶಿಫಾರಸನ್ನು ಎತ್ತಿಹಿಡಿಯಿತು.

ಸದರಿ ಆದೇಶದ ವಿರುದ್ಧ ಮೆ॥ ಲಾಡ್ ಅಂಡ್ ಸನ್ಸ್ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಶೇಷ ಅನುಮತಿ ಅರ್ಜಿಯನ್ನು ಸಲ್ಲಿಸಿತು.

ಗಣಿ ಮತ್ತು ಖನಿಜಗಳು (ವಿನಿಯಮನ ಮತ್ತು ಅಭಿವೃದ್ಧಿ) ಅಧಿನಿಯಮ, 1957ರ ಮೇರೆಗೆ ರಚಿಸಿದ ಖನಿಜ ರಿಯಾಯಿತಿ ನಿಯಮಗಳು, 1960ರ 22ನೇ ನಿಯಮವು ಗಣಿ ಗುತ್ತಿಗೆ ಅರ್ಜಿಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಉಪ ನಿಯಮ 4 ಅರ್ಜಿಗಳ ಪರಿಶೀಲನೆ ಬಗ್ಗೆ ಹೇಳುತ್ತದೆ. ಅದು ಈ ಮುಂದಿನಂತಿದೆ:–

### 22. ಗಣಿ ಗುತ್ತಿಗೆ ಪರವಾನಿಗೆಗಾಗಿ ಅರ್ಜಿ

(4) ಗಣಿ ಗುತ್ತಿಗೆ ಮಂಜೂರಾತಿಗಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ರಾಜ್ಯ ಸರ್ಕಾರವು, ಸದರಿ ಉದ್ದೇಶಕ್ಕಾಗಿ ನಿರ್ದಿಷ್ಟ ಪ್ರದೇಶವನ್ನು ಮಂಜೂರು ಮಾಡುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳತಕ್ಕದ್ದು ಮತ್ತು ಅಂಥ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು. ರಾಜ್ಯ ಸರ್ಕಾರದಿಂದ ನಿರ್ದಿಷ್ಟ ಪ್ರದೇಶವನ್ನು ಮಂಜೂರು ಮಾಡುವುದರ ಬಗ್ಗೆ ಪತ್ರವನ್ನು ಸ್ವೀಕರಿಸಿದ ಮೇಲೆ ಅರ್ಜಿದಾರನು ಗಣಿಗಾರಿಕೆ ನಕ್ಷೆಯನ್ನು ಆರು ತಿಂಗಳ ಅವಧಿಯೊಳಗಾಗಿ ಅಥವಾ ರಾಜ್ಯ ಸರ್ಕಾರವು ಅನುಮತಿಸಬಹುದಾದಂಥ ಅವಧಿಯೊಳಗೆ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು. ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಯುಕ್ತ ಅಧಿಕಾರ ಪಡೆದ ಅಧಿಕಾರಿಯು

ಯುಕ್ತವಾಗಿ ಅನುಮೋದಿಸಿದಂಥ ಗಣಿಗಾರಿಕೆ ನಕ್ಷೆಯನ್ನು ಅರ್ಜಿದಾರನು ಆ ನಿರ್ದಿಷ್ಟ ಪ್ರದೇಶಕ್ಕೆ ಗಣಿ ಗುತ್ತಿಗೆಯ ಮಂಜೂರಾತಿ ಕೋರಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು."

**ದಿನಾಂಕ: 18.03.2010ರಂದು** ಭಾರತ ಸರ್ಕಾರವು, ತಡೆಯಾಜ್ಞೆ ಏನಾದರೂ ಇದೆಯೇ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೋರಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರಿಗೆ ಒಂದು ಪತ್ರವನ್ನು ಬರೆಯಿತು.

**ಉತ್ತವಾಗಿ ದಿನಾಂಕ: 23.03.2010ರಂದು** ಭಾರತ ಸರ್ಕಾರವು, ರಾಜ್ಯ ಸರ್ಕಾರ ಮಾಡಿದ ಶಿಫಾರಸುಗಳಿಗೆ ಸಂಬಂಧಿಸಿದಂತೆ ಯಾವುದೇ ತಡೆಯಾಜ್ಞೆ ಇದೆಯೇ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೋರುತ್ತಾ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರಿಗೆ ಒಂದು ಪತ್ರವನ್ನು ಬರೆಯಿತು.

ಸರ್ವೋಚ್ಚ ನ್ಯಾಯಾಲಯ ಯಾವುದೇ ತಡೆಯಾಜ್ಞೆ ನೀಡಿಲ್ಲ ಎಂಬ ಸಂಗತಿಯನ್ನು ತಿಳಿಸುತ್ತಾ ಗಣಿ ಇಲಾಖೆಯ ಅಧೀನ ಕಾರ್ಯದರ್ಶಿಯವರು ಮರು ಉತ್ತರ ಬರೆದರು. ಇದರಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಯಾವುದೇ ಶಿಫಾರಸ್ಸಾಗಲಿ ಅಥವಾ ಒತ್ತಡವನ್ನಾಗಲಿ ಮಾಡುವ ಅವಶ್ಯಕತೆ ಕಂಡಿತ ಇರುವುದಿಲ್ಲ.

<u>ಷರಾ:–</u>

ವಾಸ್ತವಾಂಶ ಈಗಿದ್ದರೂ ಲೋಕಾಯುಕ್ತರು ಯಡಿಯೂರಪ್ಪನವರ ಮೇಲೆ ಊಹೆ ಮಾಡಿ ಅಪಾದನೆ ಹೊರಿಸುವುದು ನ್ಯಾಯಸಮ್ಮತವೇ?

## <u>ಲೋಕಾಯುಕ್ತರ ವ್ಯಾಪ್ತಿ ಮೀರಿದ ವಿಚಾರಣೆ/ ಆದೇಶ</u>

- ಸೌತ್‌ವೆಸ್ಟ್ ಮೈನಿಂಗ್ ಕಂಪನಿಯು ಜಿಂದಾಲ್ ಕಂಪನಿಗಳ ಸಮೂಹದ ಒಂದು ಅಧೀನ ಸಂಸ್ಥೆ.
- ಸೌತ್‌ವೆಸ್ಟ್ ಮೈನಿಂಗ್ ಕಂಪನಿಯು ಪ್ರೇರಣಾ ಟ್ರಸ್ಟ್‌ಗೆ 10 ಕೋಟಿ ರೂ. ಮೊತ್ತವನ್ನು ದೇಣಿಗೆ ನೀಡಿದೆ.
- ಜಿಂದಾಲ್ ಕಂಪನಿಗಳ ಸಮೂಹವು ಗಣಿ ಗುತ್ತಿಗೆ ಮಂಜೂರು ಮಾಡುವಂತೆ ಕೋರಿ ಅರ್ಜಿಗಳನ್ನು ಸಲ್ಲಿಸಿತ್ತು.

. ಮೇಲಿನ ವಿಷಯಗಳಿಗೂ ಲೋಕಾಯುಕ್ತರಿಗೆ ವಹಿಸಿರುವ ವಿಚಾರಣಗೆ ಒಳಪಡುವುದಿಲ್ಲ ಆದರೂ ಲೋಕಾಯುಕ್ತರು ವ್ಯಾಪ್ತಿ ಮೀರಿ ತಮ್ಮದೇ ಆದ ಊಹೆ ಮೇಲೆ ವರದಿ ನೀಡಿದ್ದಾರೆ. ಅದು ನ್ಯಾಯಸಮಂಜಸವಾಗಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಕಾನೂನು ಅಡಿಯಲ್ಲಿ ತನ್ನ ಗಮನಕ್ಕೆ ಬರುವ ವಿಚಾರಗಳ ಬಗ್ಗೆ ಆದೇಶವನ್ನು ಮಾಡುತ್ತಾರೆ. ಅವರ ಮಕ್ಕಳು ಈ ದೇಶದ ನಾಗರೀಕ ಪ್ರಜೆಗಳಾಗಿ ಸಮಾಜಕ್ಕೆ ಅವರದೇ ಆದ ಸೇವೆಯನ್ನು ಹಮ್ಮಿಕೊಳ್ಳುವುದು ಅವರ ಸಮಾಜಿಕ ಬದ್ದತೆಯನ್ನು ತೋರುತ್ತದೆ. ಎಲ್ಲರಂತೆ ಅವರೂ ಸಹ ವಿದ್ಯಾಸಂಸ್ಥೆಗಳನ್ನು ಕಟ್ಟಿ ಸಮಾಜಿಕ ಸೇವಾ ಅಕಾಂಶಗಳಾಗಿದ್ದಾರೆ. ಕಾನೂನು ರೀತಿ ಸಾರ್ವಜನಿಕ ಸಂಸ್ಥೆಗಳಿಗೆ ದೇಣಿಗೆ ತೆಗೆದುಕೊಳ್ಳುವುದು ನಿಷೇದವಿಲ್ಲ.

ರಾಜಕೀಯದಲ್ಲಿ ಉನ್ನತ ಸ್ಥಾನದಲ್ಲಿರುವ ಬಹುಮಂದಿ ರಾಜಕಾರಣಿಗಳಾಗಲಿ ಅಥವಾ ಅವರ ಕುಟುಂಬದವರಾಗಲಿ ವಿದ್ಯಾಸಂಸ್ಥೆಗಳನ್ನು ಕಟ್ಟಿ ದೇಣಿಗೆ ಪಡೆದಿದ್ದಾರೆ. ಹಾಗಾದರೆ ಅವರ ಅಧಿಕಾರಿ ಅವಧಿಯ ಆದೇಶವನ್ನು ಅವರ ಸಂಸ್ಥೆಗಳಿಗೆ ಸಂಬಂಧ ಕಲ್ಪಿಸಬಹುದೇ?

**ಷರಾ:–**

ಜಿಂದಾಲ್ ಕಂಪನಿಗೆ ಯಾವುದೇ ಸಹಾಯ ಮಾಡದಿರುವಾಗ ಯಡಿಯೂರಪ್ಪನವರ ಹೆಸರನ್ನು ಅನವಶ್ಯಕವಾಗಿ ಊಹೆ ಮೇಲೆ ವರದಿಯಲ್ಲಿ ಸೇರಿಸಿರುವುದು ನ್ಯಾಯಸಮ್ಮತವೇ?

## ಲೋಕಾಯುಕ್ತರ ತೀರ್ಮಾನ

ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರಾಸಿಕ್ಯೂಷನ್‌ಗಾಗಿ ತೀರ್ಮಾನ ಕೈಗೊಳ್ಳಲು ಇದೇ ಆಧಾರವಾಗಿದೆ ಎಂಬ ಅಂಶಗಳು ಇದರಿಂದ ಸ್ಪಷ್ಟವಾಗುತ್ತದೆ. ಈ ಅಂಶಗಳು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ಅಡಿಯಲ್ಲಿನ ವರದಿಗೆ ಆಧಾರವಾಗುತ್ತವೆಯೇ?

ಲೋಕಾಯುಕ್ತರು ಈ ವಿವಾದಾಂಶಗಳನ್ನು ವ್ಯವಹರಿಸುವಲ್ಲಿ ಈ ಮುಂದಿನ ಸಂಗತಿಗಳನ್ನು ಸಹ ಹೇಳಿದ್ದಾರೆ.

"'ಸೌತ್ ವೆಸ್ಟ್ ಮೈನಿಂಗ್ ಕಂಪನಿಗೆ ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ ಈ ವ್ಯವಹಾರಗಳನ್ನು ನಡೆಸಿರುವ ಸಾಧ್ಯತೆಯಿದೆ. ಇದು ವ್ಯವಹಾರದ ಬಗ್ಗೆ ತೀವ್ರ ಸಂಶಯ ಉಂಟು ಮಾಡುತ್ತದೆ. ವಿಷಯವನ್ನು ಮತ್ತಷ್ಟು ಸಮಗ್ರವಾಗಿ ವಿಚಾರಣೆ ಮಾಡುವ ಅಗತ್ಯ ಉಂಟಾಗಿದೆ".

ಯು.ವಿ.ಸಿಂಗ್ ವರದಿಯಲ್ಲಿ ನಿರ್ದಿಷ್ಟ ಅಪಾದನೆ ಶ್ರೀ ಬಿ.ಎಸ್.ಯಡಿಯೂರಪ್ಪನವರ ಮೇಲೆ ಇಲ್ಲದಿದ್ದರೂ ಲೋಕಾಯುಕ್ತರು ತಮ್ಮದೇ ಆದ ತೀರ್ಮಾನಕ್ಕೆ ಬಂದು ವರದಿ ನೀಡಿರುವುದು ನ್ಯಾಯಸಮ್ಮತವೇ?

**ಆದಕಾರಣ, ಮೇಲಿನ ಸಂಗತಿಗಳಿಂದ ಏನನ್ನು ಗ್ರಹಿಸಬಹುದು?**

• ಲೋಕಾಯುಕ್ತರ ಪ್ರಕಾರವೂ ಸಹ, ವಿಷಯವನ್ನು ವಿಚಾರಣೆ ಮಾಡುವ ಅಗತ್ಯವಿದೆ ಎಂದರೆ ವಿಚಾರಣೆ ಅಪೂರ್ಣವಾಗಿದೆ ಎಂದರ್ಥ.

• ಇದು ವಾಸ್ತವಿಕವಾಗಿ ಸಂಶಯವನ್ನು ಮೂಡಿಸುತ್ತದೆ ಎಂದರೆ ಅವರು ಯಾವುದೇ ಸೂಕ್ತ ನಿರ್ಧಾರಕ್ಕೆ ಬರಲಾಗಿಲ್ಲ ಮತ್ತು ಸಂಶಯ ಹಾಗೆಯೇ ಉಳಿದಿದೆ.

• ಲೋಕಾಯುಕ್ತರು ಹೇಳುತ್ತಾರೆ 'ಅದು ಸಾಧ್ಯವಿದೆ'. ಆದಕಾರಣ ಪ್ರಕರಣದ ಪ್ರಸ್ತುತ ಸಂಗತಿಗಳಲ್ಲಿಯೇ ಎರಡು ಸಾಧ್ಯತೆಗಳಿರಬಹುದು.

### ಮೇಲಿನ ಅಂಶಗಳಿಂದ ಯಾವುದನ್ನು ಊಹಿಸಬಹುದು?

- ವಿಚಾರಣೆ ಪೂರ್ಣಗೊಂಡಿಲ್ಲದಿರುವುದು.
- ಲೋಕಾಯುಕ್ತರು ಸ್ವತಃ, ನಿರ್ಧಾರದ ಬಗ್ಗೆ ಖಚಿತತೆ ಹೊಂದಿಲ್ಲದಿರುವುದು.
- ಯಾವುದೇ ನಿರ್ಣಯವು ಸಂಶಯದ ಮೇಲೆ ಆಧಾರಿತವಾಗಬಲ್ಲುದು.

**ಲೋಕಾಯುಕ್ತರು ನಡೆಸಿದ ವಿಚಾರಣೆಯ ಸ್ವರೂಪವೇನು ಮತ್ತು ಅವರು ಹೇಳಬೇಕಾಗಿರುವ ಸಂಗತಿಗಳೇನು?**

ಲೋಕಾಯುಕ್ತರು ಭಾರತ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದವರು ಎಂಬುದನ್ನು ಪರಿಗಣಿಸಿದರೆ

- ಲೋಕಾಯುಕ್ತರು ಸೌತ್ ವೆಸ್ಟ್ ಮೈನಿಂಗ್, ಪ್ರೇರಣ ಟ್ರಸ್ಟ್ ಅಥವಾ ಯಾವುದೇ ಸಂಸ್ಥೆಗಳಿಂದ ಹೇಳಿಕೆಗಳನ್ನು ದಾಖಲು ಮಾಡಿದ್ದಾರೆಯೇ?

**ಲೋಕಾಯುಕ್ತರು ಅವರ ಮುಂದೆ ಇತ್ಯರ್ಥಗೊಳ್ಳದೆ ಸುಮಾರು ಒಂದು ವರ್ಷದಿಂದ ಬಾಕಿ ಇದ್ದ ಅರ್ಜಿಗಳನ್ನು ಪರಿಶೀಲಿಸಿದ್ದಾರೆಯೇ?**

- ಲೋಕಾಯುಕ್ತರು ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಂದ ಮೂಲ ವಿವರಣೆಯನ್ನಾದರೂ ಕೇಳಿದ್ದಾರೆಯೇ?

- ಲೋಕಾಯುಕ್ತರು, ಮುಖ್ಯ ಮಂತ್ರಿಯವರು ಯಾವ ಯಾವ ಆದೇಶಗಳನ್ನು ಹೊರಡಿಸಿದ್ದರು ಎಂಬ ಬಗ್ಗೆ ಪತ್ತೆ ಮಾಡಿದ್ದರೆ?

ಮೇಲ್ಕಂಡ ಎಲ್ಲ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿವೆ. ಆದರೆ ಅನೇಕ ಪತ್ರಿಕಾ ಹೇಳಿಕೆಗಳಲ್ಲಿ ಲೋಕಾಯುಕ್ತರು ನೀಡುವ ಉತ್ತರ ಶ್ರೀ ಬಿ.ಎಸ್. ಯಡಿಯೂರಪ್ಪನವರು ಆರೋಪಿಯಾಗಿದ್ದಾರೆ ಎಂಬುದು. ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗದಿದ್ದರೂ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಸ್ಥಾನವನ್ನು ತ್ಯಜಿಸಬೇಕಾಯಿತು. ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಬ್ಬ ದಿನಗೂಲಿ ನೌಕರನನ್ನೂ ಇಷ್ಟು ಕೆಟ್ಟದಾಗಿ ನಡೆಸಿಕೊಂಡಿರುವುದಿಲ್ಲ. ಜನರಿಂದ ಆಯ್ಕೆಯಾಗಿ ರಾಜ್ಯದ ಕಾರ್ಯಾಂಗದ ಅತ್ಯುನ್ನತ ಹುದ್ದೆಯಲ್ಲಿರುವ ವ್ಯಕ್ತಿಯನ್ನು ಕಾಟಾಚಾರದ ತನಿಖೆಯ ಮೂಲಕ ಹುದ್ದೆಯಿಂದ ಕಿತ್ತೊಗೆಯಬಹುದಾದರೆ, **ಯಾರೇ ಸರ್ಕಾರಿ ನೌಕರರಿಗೆ ನ್ಯಾಯ ದೊರೆಯುತ್ತದೆಂದು ನಿರೀಕ್ಷಿಸಲು ಸಾಧ್ಯವೇ?**

ಟ್ರಸ್ಟುಗಳು ದೇಣಿಗೆ ಹಣವನ್ನು ಸ್ವೀಕರಿಸುವುದು (ಅಸಾಮಾನ್ಯವಾದ) ಸಂಗತಿ ಏನಲ್ಲ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯ. ಆದರೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಆ ಟ್ರಸ್ಟ್‌ನೊಂದಿಗೆ ಯಾವುದೇ ರೀತಿಯ ಸಂಬಂಧ ಹೊಂದಿಲ್ಲ ಎಂಬುದನ್ನು ಉಲ್ಲೇಖಿಸುವುದು ಸುಸಂಗತವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಆ ಟ್ರಸ್ಟನ್ನು ಶಿಕ್ಷಣ ತಜ್ಞರೆಂದು ಮತ್ತು ದಾನಿಯೆಂದು ವ್ಯಾಪಕವಾಗಿ ಪ್ರಶಂಸೆಗೆ ಪಾತ್ರರಾದ ಪ್ರೊ ಎಂ.ಆರ್. ದೊರೈಸ್ವಾಮಿ ಅವರು ನಡೆಸುತ್ತಿದ್ದಾರೆ. ಆ ಟ್ರಸ್ಟ್ ತನ್ನ ಆಶ್ರಯದಲ್ಲಿ ಸ್ವತಃ ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಅದು ತನ್ನ ಚಟುವಟಿಕೆಗಳ ಅಂಗವಾಗಿ ಸಮಾಜದ ಏಳಿಗೆಯ ಉದ್ದೇಶಕ್ಕಾಗಿ ಮತ್ತು ದೀನ–ದುರ್ಬಲರಿಗೆ ಶೈಕ್ಷಣಿಕ ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಪ್ರಾಮಾಣಿಕಸೇವೆಯನ್ನು ಸಲ್ಲಿಸಿದೆ. ಟ್ರಸ್ಟ್‌ನ ಲೆಕ್ಕಪತ್ರಗಳನ್ನು ಪರಿಶೀಲಿಸಿದರೆ, ಸೌತ್ ವೆಸ್ಟ್ ಮೈನಿಂಗ್ ಕಂಪನಿಯಿಂದ ಸ್ವೀಕರಿಸಲಾಗಿದ್ದ 10 ಕೋಟಿ ರೂಪಾಯಿಗಳ ಸದರಿ ಹಣವನ್ನು ಕಟ್ಟಡ ನಿರ್ಮಾಣಕ್ಕಾಗಿ ವಾಸ್ತವವಾಗಿ ಬಳಸಿಕೊಳ್ಳಲಾಗಿದ್ದು ಟ್ರಸ್ಟ್‌ಗೋಸ್ಕರ ಅಂತಿಮವಾಗಿ ಉಪಯೋಗಿಸಲಾಗಿದೆ ಎಂಬುದು ಕಂಡುಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕ ರಾಜ್ಯದಲ್ಲಿ ಅಕ್ರಮ ಗಣಿ ಚಟುವಟಿಕೆಗಳನ್ನು ಹತ್ತಿಕ್ಕಲು ಕಾರಣರಾಗಿದ್ದರೆ ಮತ್ತು ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರೆ ಎಂಬುದನ್ನು ಲೋಕಾಯುಕ್ತರು ಕಡೆಗಣಿಸಿಬಿಟ್ಟಂತೆ ತೋರುತ್ತದೆ. 24–7–2010ರಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಗಣಿಗಾರಿಕೆ ಮತ್ತು ಸಂಬಂಧಿತ ಚಟುವಟಿಕೆ ಕುರಿತು ಒಂದು ವಿಶೇಷ ಆಧ್ಯಾಯವನ್ನೇ ಮೀಸಲಿಡಲಾಗಿತ್ತು. ಕಬ್ಬಿಣದ ಅದಿರಿನ ರಫ್ತನ್ನು ನಿಷೇಧಿಸಿ ಎಂಬುದರ ಸಾರಾಂಶವನ್ನು ಈ ಮುಂದೆ ನಿರೂಪಿಸಲಾಗಿದೆ:

ಲೋಕಾಯುಕ್ತರು ನೀಡಿರುವ ಎರಡನೆಯ ವರದಿಯ ಹಲವಾರು ತಪ್ಪು-ಒಪ್ಪುಗಳಿಂದ ಕೂಡಿರುತ್ತದೆ. ಇದು ಯಾವುದೋ ಕಾಲಮಿತಿಯೊಳಗೆ ವರದಿ ಸಲ್ಲಿಸುವ ಆತುರದಲ್ಲಿ ನೀಡಿರುವುದು. ಇಲ್ಲಿ ಕಂಡು ಬರುವ ತಪ್ಪುಗಳೇ ಸಾಕ್ಷಿಯಾಗಿರುತ್ತದೆ.

ಲೋಕಾಯುಕ್ತ ವರದಿಯ ಮೊದಲನೇ ಅಧ್ಯಾಯದಲ್ಲಿ ರಾಜ್ಯದಲ್ಲಿ ನಡೆದಿರಬಹುದಾದ ಒಟ್ಟಾರೆ ರಫ್ತು ಮತ್ತು ಅಕ್ರಮ ಅದಿರು ಸಾಗಣೆ ಬಗ್ಗೆ ಅಂಕಿ ಅಂಶಗಳನ್ನು ನೀಡಲಾಗಿದೆ. ಇದಕ್ಕೆ ಪೂರಕವಾಗಿ ವರದಿಯಲ್ಲಿ ಅದಿರು ರಫ್ತಿನ ಬಗ್ಗೆ ನೀಡಿರುವ ಎರಡು ಪಟ್ಟಿಗಳನ್ನು ಯಥಾವತ್ತಾಗಿ ನೀಡಲಾಗಿದೆ.

**ರಫ್ತಿನ ಮೊತ್ತವನ್ನು ತಪ್ಪಾಗಿ ವರದಿ ಮಾಡಿರುವುದು**

**ವರದಿಯಲ್ಲಿ ಇದ್ದಂತೆ:**

| Port | 2006-07 | 2007-08 | 2008-09 | 2009-10 | 2010(A-D) | Total |
|---|---|---|---|---|---|---|
| Belekeri | 4309527 | 6201908 | 1771256 | 6501805 | 1584481 | 20368977 |
| Chennai/Ennore | 6229020 | 10584118 | 8650900 | 8020479 | 1767401 | 35251918 |
| Kakinada | 3217681 | 1588389 | 1158892 | 1604008 | 549131 | 8118101 |
| Karwar | 1378776 | 1851025 | 2423995 | 1558061 | 468134 | 7679991 |
| Krishnapatnam | 629830 | 1969078 | 6526577 | 10086277 | 5318164 | 24529926 |
| Mangalore | 5315222 | 8317818 | 8911456 | 5628426 | 1046386 | 29219308 |
| Visakhapatanam | 431076 | 51155 | 9191 | 50644 | 81951 | 624017 |
| **Total** | **21511132** | **30563491** | **29452267** | **33449700** | **10815648** | **125792238** |

**ವರದಿಯಲ್ಲಿ ಇದ್ದಂತೆ:**

| Destination Port | 2006-07 | 2007-08 | 2008-09 | 2009-10 | 2010 (Apr Jul) | Total |
|---|---|---|---|---|---|---|
| Belekeri | 3243296 | 4558414 | 1553093 | 2850965 | 425040 | 12630808 |
| Chennai/Ennore | 9001445 | 9771492 | 7172969 | 9201921 | 1379816 | 3327643 |
| Kakinada | 1954027 | 1712296 | 1094536 | 1446144 | 279504 | 6486507 |
| Karwar | 2032015 | 2474833 | 2157436 | 998038 | 307824 | 7970146 |
| Krishnapatnam | 107883 | 1529335 | 4018416 | 4954122 | 2749176 | 13358932 |
| Mangalore | 4894448 | 6164277 | 7002262 | 3721270 | 785618 | 22567875 |
| Visakhapatanam | 138965 | 38089 | 11400 | 103200 | 264000 | 555654 |
| Ports Notknown | 380565 | 1347750 | 1088704 | 427200 | - | 3244219 |
| **Total** | **21752644** | **27596486** | **24098816** | **20702860** | **6190978** | **100341784** |

2006-07 ರಿಂದ 2010ರವರೆಗೆ ಒಟ್ಟು **2,98,60,647** ಟನ್ ಅದಿರು ಅಕ್ರಮವಾಗಿ ರಫ್ತು ಆಗಿದೆ ಎಂದು ತಿಳಿಸಿದ್ದಾರೆ. ವರದಿಯಲ್ಲಿ ಇರುವ ಅಂಕಿ-ಅಂಶಗಳ ಪಟ್ಟಿಯಲ್ಲಿ "ಕೂಡಿ-ಕಳೆ"ಯುವ ಲೆಕ್ಕದಲ್ಲಿ ತಪ್ಪುಗಳಾಗಿವೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಸುಮಾರು **44,10,193** ಟನ್ನುಗಳು ಹೆಚ್ಚುವರಿಯಾಗಿ ತಪ್ಪಾಗಿ ವರದಿ ಮಾಡಲಾಗಿದೆ.

ವರದಿಯಲ್ಲಿರುವ 'ಅಂಕಿ ಅಂಶಗಳ' ಪಟ್ಟಿಯನ್ನು ಗಮನಿಸಿದರೆ, ಅದಿರು ರಾಜ್ಯದ ಬಂದರುಗಳು ಮಾತ್ರವಲ್ಲದೆ ದೇಶದ ಇತರೇ ರಾಜ್ಯಗಳಿಂದಲೂ, ಹೊರದೇಶಕ್ಕೆ ರಫ್ತಾಗಿರುವುದು ಕಂಡುಬರುತ್ತದೆ. ನಿಜಾಂಶವೇನೆಂದರೆ, ಪಟ್ಟಿಯಲ್ಲಿ ತೋರಿಸುವ ಒಟ್ಟಾರೆ ರಫ್ತಿನಲ್ಲಿ ಶೇಕಡ 45ರಷ್ಟು ಮಾತ್ರ ಮತ್ತು ವರದಿಯಲ್ಲಿ ತೋರಿಸಿರುವ ಒಟ್ಟಾರೆ ಅಕ್ರಮ ರಫ್ತಿನಲ್ಲಿ ಶೇಕಡ 61ರಷ್ಟು

ಮಾತ್ರ ರಾಜ್ಯದಿಂದ ರವಾನೆಯಾಗಿರುತ್ತದೆ. ಇತರೆ ರಾಜ್ಯಗಳಿಂದ, ಹೊರದೇಶಕ್ಕೆ ರಫ್ತಾಗಿರುವುದಕ್ಕೂ ಸಹ ರಾಜ್ಯ ಸರ್ಕಾರವನ್ನು ಹೊಣೆ ಮಾಡಲಾಗಿದೆ. ಇದು ಎಷ್ಟರ ಮಟ್ಟಿಗೆ ಸರಿ?

ರಾಜ್ಯ ಸರ್ಕಾರವು, ರಾಜ್ಯದಲ್ಲಿ ಮೌಲ್ಯವರ್ಧನೆಗೆ ಉತ್ತೇಜನ ನೀಡಲು ಮತ್ತು ಖನಿಜಗಳಿಗೆ (ಕಬ್ಬಿಣದ ಅದಿರು) ರಿಯಾಯಿತಿ ಮಂಜೂರು ಮಾಡುವಲ್ಲಿ ಪಾರದರ್ಶಕತೆ ಕಾಪಾಡುವ ದೃಷ್ಟಿಯಿಂದ ಇದುವರೆಗೂ ಖನಿಜಗಳನ್ನು ತೆಗೆದಿಲ್ಲದಿರುವ 10.00 ಹೆಕ್ಟೇರುಗಳಿಗೂ ಹೆಚ್ಚು ಪ್ರದೇಶಗಳನ್ನು ಅಧಿಸೂಚಿಸಲು ನಿರ್ಧಾರ ತೆಗೆದುಕೊಂಡಿದೆ.

## ಕಾರವಾರ ಜಿಲ್ಲೆಯ ಬೇಲಿಕೇರಿ ಬಂದರಿನಲ್ಲಿ ಕಬ್ಬಿಣದ ಅದಿರು ಮುಟ್ಟುಗೋಲು

ಕಾರವಾರ ಜಿಲ್ಲೆಯ ಬೇಲಿಕೇರಿ ಬಂದರಿನಲ್ಲಿ ಅರಣ್ಯ ಇಲಾಖೆಯು ಮುಟ್ಟುಗೋಲು ಹಾಕಿಕೊಂಡಿದ್ದ 5 ಲಕ್ಷ ಟನ್ ಕಬ್ಬಿಣದ ಅದಿರನ್ನು ರಫ್ತು ಮಾಡಲಾಗಿದೆಯೆಂಬ ಅಂಶ ಕಂಡುಬಂದು, ಸರ್ಕಾರವು ತಕ್ಷಣವೇ ಬಂದರಿನ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತುಗೊಳಿಸಿತು ಮತ್ತು ಆ ವಿಷಯವನ್ನು ಮುಂದಿನ ತನಿಖೆಗಾಗಿ ಸಿಐಡಿಗೆ ವಹಿಸಲಾಗಿದೆ.

ತನಿಖೆಯುಈಗಾಗಲೇ ಆರಂಭಗೊಂಡಿದೆ. ಅಲ್ಲದೆ, ಅರಣ್ಯ ಇಲಾಖೆಯು, ಅಂಕೋಲದಲ್ಲಿನ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅಪರಾಧ ಸಂಖ್ಯೆ 17/2009–10ರಲ್ಲಿ ಒಂದು ಅರಣ್ಯ ಅಪರಾಧವನ್ನು ದಾಖಲಿಸಿದೆ, ಹಾಗೆಯೇ ಕಾರವಾರದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಅಪರಾಧ ಸಂಖ್ಯೆ 06/2009–10ರಲ್ಲಿ ಮತ್ತೊಂದು ಅಪರಾಧವನ್ನು ದಾಖಲಿಸಿದೆ. ಮುಂದುವರೆದು, ಮೆ॥ ಅದಾನಿ ಎಂಟರ್‌ಪ್ರೈಸಸ್ ಮತ್ತು ಶ್ರೀ ಮಲ್ಲಿಕಾರ್ಜುನ ಷಿಪ್ಪಿಂಗ್ ಪ್ರೈ. ಲಿ. ಇವರಿಗೆ ನೀಡಲಾಗಿದ್ದ ಹಮಾಲಿ ಪರವಾನಗಿ ಮತ್ತು ಭೂ ಬಳಕೆಯ ಪರವಾನಗಿಗಳನ್ನು ತಕ್ಷಣದಿಂದಲೇ, ದಿನಾಂಕ: 29.6.2010ರಿಂದ ರದ್ದುಪಡಿಸಲಾಗಿದೆ.

## ಕಬ್ಬಿಣ ಮತ್ತು ಉಕ್ಕು ಯೋಜನೆಗಳಿಗೆ ಒಪ್ಪಿಗೆ

ನಮ್ಮ ಖನಿಜ ನೀತಿಯಿಂದ ಉತ್ತೇಜಿತರಾದ ಅನೇಕ ಹೆಸರಾಂತ ಕಂಪನಿಗಳು, ಕರ್ನಾಟಕದಲ್ಲಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳನ್ನು ಸ್ಥಾಪಿಸಲು ಮುಂದೆಬಂದಿವೆ. ಒಟ್ಟು 2,56,161.08 ಕೋಟಿಗಳ ಬಂಡವಾಳ ಹೂಡಿಕೆಗಾಗಿ ಒಟ್ಟು 53 ಒಪ್ಪಂದ ಪತ್ರಗಳಿಗೆ ಸಹಿ ಮಾಡಲಾಗಿದೆ. ಅವುಗಳಲ್ಲಿ, ವಿಶ್ವಮಟ್ಟದಲ್ಲಿ ಹೆಸರು ಗಳಿಸಿದಂಥ ಕಂಪನಿಗಳಾದ ಮೆ॥ ಆರ್ಸೆಲರ್ ಮಿಟ್ಟಲ್, ಪೋಸ್ಕೋ, ಟಾಟಾ ಮೆಟಾಲಿಕ್ಸ್, ಮೆ॥ ಎಸ್ಸಾರ್ ಸ್ಟೀಲ್ಸ್ ಲಿ. ಮತ್ತು ಮೆ॥ ಭೂಷಣ್ ಸ್ಟೀಲ್ಸ್ ಲಿ. ಕಂಪನಿಗಳೂ ಕೂಡ ಸೇರಿವೆ.

ಎಂಎಂ(ಡಿ ಮತ್ತು ಆರ್) ಅಧಿನಿಯಮ 1957 ಮತ್ತು ಎಂ.ಸಿ. ಆರ್ಸ್ 1960ರ ಉಪಬಂಧಗಳ ಮೇರೆಗೆ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಗಟ್ಟಲು ಎಲ್ಲಾ ಸಂಬಂಧಿತ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಹಾಗೆಯೇ ಮೌಲ್ಯವರ್ಧನೆಯನ್ನು ಕೈಗೊಳ್ಳುವ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಪ್ರಯತ್ನಗಳನ್ನೂ ಮುಂದುವರಿಸಲಾಗಿದೆ. ವಾಸ್ತವವಾಗಿ, ಸರ್ಕಾರವು ದಿನಾಂಕ 28.7.2010ರಿಂದಲೇ ಜಾರಿಗೆ ಬರುವಂತೆ ಕಬ್ಬಿಣ ಅದಿರಿನ ರಫ್ತನ್ನು ಸಂಪೂರ್ಣವಾಗಿ ನಿಷೇಧಿಸಿ ಆದೇಶ ಹೊರಡಿಸಿದೆ. ಅಲ್ಲದೆ, ಅದು, 10 ಬಂದರುಗಳಿಂದ ಕಬ್ಬಿಣ ಅದಿರಿನ ರಫ್ತನ್ನು ಸಂಪೂರ್ಣವಾಗಿ ನಿಷೇಧಿಸಿ ದಿನಾಂಕ 26.7.2010ರಂದು ಆದೇಶ ಹೊರಡಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರೂ ಸೇರಿದಂತೆ ಸರ್ಕಾರದ ಉನ್ನತ ಅಧಿಕಾರಿಗಳು, ರಾಜ್ಯ ಸರ್ಕಾರವು ತೆಗೆದುಕೊಂಡ ಕ್ರಮಗಳನ್ನು ಲೋಕಾಯುಕ್ತರ ಗಮನಕ್ಕೆ ತರುತ್ತಾ ಪವರ್ ಪಾಯಿಂಟ್ ಪ್ರಾತ್ಯಕ್ಷಿಕೆಯನ್ನು ಮಾಡಿದಾಗ್ಯೂ ವರದಿಯಲ್ಲಿ ನಿರ್ಣಯಗಳನ್ನು ದಾಖಲಿಸುವಾಗ ಲೋಕಾಯುಕ್ತರು ಈ ಎಲ್ಲಾ ಸಂಗತಿಗಳನ್ನು ಏಕೆ ತಮ್ಮ ಗಮನಕ್ಕೆ

ತೆಗೆದುಕೊಳ್ಳಲಿಲ್ಲ? ಮತ್ತು ವರದಿಯಲ್ಲಿ ಇದಕ್ಕೆ ಏಕೆ ಉತ್ತರವಿಲ್ಲ ಎಂದು ಕೇಳುವುದು ಕೂಡ ಅಗತ್ಯವಾಗಿರುತ್ತದೆ. ಸೋರಿಕೆಯಾದ ವರದಿಯಲ್ಲಿ ಮತ್ತು ಅಂತಿಮ ವರದಿಯಲ್ಲಿ ಹಲವು ವ್ಯತ್ಯಾಸಗಳು ಕೂಡ ಇವೆ. ಸೋರಿಕೆಯಾದ ವರದಿಯಲ್ಲಿದ್ದಂಥ ಇತರೆ ರಾಜಕಾರಣಿಗಳಾದ ಶ್ರೀ ಅನಿಲ್ ಲಾಡ್ ಮತ್ತು ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರ ಹೆಸರುಗಳು ಮಧ್ಯಂತರ ವರದಿಯಲ್ಲಿಯೂ ಸಹ ಇದ್ದವು. ಮುಂದುವರೆದು, ಅಂತಿಮವಾಗಿ ಈ ವರದಿಯು ಹೊರಬಂದಾಗ ಈ ಯಾವ ಹೆಸರುಗಳೂ ಕಂಡುಬಂದಿಲ್ಲ. ಮಾನ್ಯ ಲೋಕಾಯುಕ್ತರು, ಈ ವ್ಯತ್ಯಾಸಗಳ ಬಗ್ಗೆ, ವರದಿಯನ್ನು ಸಲ್ಲಿಸುವ ಪೂರ್ವದಲ್ಲಿಯಾಗಲೀ ಅಥವಾ ನಂತರದಲ್ಲಿಯಾಗಲೀ ಸ್ಪಷ್ಟೀಕರಣ ನೀಡಲಿಲ್ಲ. ಈ ಸಂಗತಿಗಳಲ್ಲಿ ಪರಸ್ಪರ ಹೊಂದಾಣಿಕೆಯಿಲ್ಲ ಮತ್ತು ಅವುಗಳ ನಡುವೆ ವೈರುಧ್ಯವಿದೆ.

ಅಂತಿಮವಾಗಿ:–

ಈ ಎಲ್ಲಾ ಸಂಗತಿಗಳನನು ಗಮನಿಸಿದರೆ ಕೇವಲ ಬಿಜೆಪಿ ಸರ್ಕಾರ ಹಾಗೂ ಬಿ.ಎಸ್.ಯಡಿಯೂರಪ್ಪನವರನ್ನು ಗುರಿಯಾಗಿಸಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ವರದಿಯು ಮೇಲುನೋಟಕ್ಕೆ ದೋಷಪೂರಿತವಾಗಿದೆ. ಈ ಮುಂದಿನ ಕಾರಣಗಳಿಂದಾಗಿ ಅದು ವಿಫಲವಾಗುತ್ತದೆ

1. ಮೊದಲನೆ ವರದಿಯನ್ನು ಸಿದ್ಧಪಡಿಸುವಾಗ ಇತರರಿಗೆ ನೋಟೀಸನ್ನು ನೀಡಲಾಗಿತ್ತು. ಆದರೆ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಇತರರಿಗೆ ಮಾನ್ಯ ಲೋಕಾಯುಕ್ತರು ಅಂಥ ಅವಕಾಶವನ್ನು ನಿರಾಕರಿಸಿದ್ದಾರೆ.
2. ಅದು ಸ್ವಾಭಾವಿಕ ನ್ಯಾಯತತ್ವವನ್ನು ಅದು ಉಲ್ಲಂಘಿಸುತ್ತದೆ.
3. 2000ದಿಂದ 2006ರ ವರೆಗೆ ತಿವ್ರತರ ಅಕ್ರಮ ಗಣಿಗಾರಿಕೆ ನಡೆದಿದ್ದರೂ ಅ ಅವಧಿಯ ತನಿಖೆ ಕೈಬಿಡಲು ಸಕಾರಣ ನಮೂದಿಸಿಲ್ಲ.
4. ಮೆ॥ ಜಿಂದಾಲ್ ಕಂಪನಿಗಳ ಸಮೂಹದ ಪರವಾಗಿ ಯಾರೇ ಅಧಿಕಾರಿಗಳು ಪಕ್ಷಪಾತ ಎಸಗಿಲ್ಲ ಅಥವಾ ಯಾವುದೇ ಆದೇಶವನ್ನು ಅವರ ಪರವಾಗಿ ಹೊರಡಿಸಿಲ್ಲ ಎನ್ನುವ ಸಂಗತಿಯನ್ನು ವರದಿ ಕಡೆಗಣಿಸಿದೆ.
5. ಯು.ವಿ. ಸಿಂಗ್ ವರದಿಯು ಶ್ರೀ ಬಿ.ಎಸ್. ಯಡಿಯೂರಪ್ಪರವರ ಮೇಲೆ ಆರೋಪ ಹೊರಿಸಿಲ್ಲ. ಆದ್ದರಿಂದ, ನೈಜ ಸಂಗತಿಗಳನ್ನು ತಿಳಿದುಕೊಳ್ಳದೇ ಒಬ್ಬ ವ್ಯಕ್ತಿಯನ್ನು ನಿಂದನೆಗೆ ಗುರಿಪಡಿಸಬಹುದೇ? ಎನ್ನುವುದನ್ನು ನೋಡುವುದು ಅಗತ್ಯವಾಗುತ್ತದೆ.
6. ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ರಫ್ತು ನಿಷೇದ ಮಾಡಿ ದಿಟ್ಟತನವನ್ನು ತೋರಿದ ಶ್ರೀ.ಬಿ.ಎಸ್.ಯಡಿಯೂರಪ್ಪನವರನ್ನು ಅಪರಾಧಿಯಂತೆ ಬಿಂಬಿಸುವುದರಲ್ಲಿ ಸತ್ಯಾಂಶ ಇಲ್ಲ.
7. ಅಕ್ರಮ ಗಣಿಗಾರಿಕೆ ತಪ್ಪಿಸಲು ದಿಟ್ಟಕ್ರಮ ತೆಗೆದುಕೊಂಡು ಸರ್ಕಾರ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಸಂಗ್ರಹಯಕ್ಕೆ ಕಾರಣವಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಕ್ರಮವನ್ನು ವರದಿ ಕಡೆಗಣಿಸಿದೆ.
8. ವಾಸ್ತವಾಂಶ ಅರಿಯದೆ ಶ್ರೀ ಬಿ.ಎಸ್.ಯಡಿಯೂರಪ್ಪನವರು ಎಂ.ಎಂ.ಎಲ್‌ಗೆ ನಷ್ಟ ಮಾಡಿ ಜೆ.ಎಸ್.ಡಬ್ಲ್ಯೂಎಲ್ ನಿಂದ ಅವರ ಮಕ್ಕಳ ಟ್ರಸ್ಟ್‌ಗೆ ದೇಣಿಗೆ ಪಡೆದಿದ್ದಾರೆ ಎಂಬ ಅಪಾದನೆ ಮಾಡುವುದು ನ್ಯಾಯಸಮ್ಮತವಾಗಿಲ್ಲ.
9. ಲೋಕಾಯುಕ್ತರಿಗೆ ವಹಿಸಿದ Terms of Reference ಉಲ್ಲಂಘಣೆಯಾಗಿದೆ, ಅದರಿಂದ ನೈಜ ತಪ್ಪಿಸ್ಥರು ಬೆಳಕಿಗೆ ಬಂದಿಲ್ಲ.

10. ಅನೇಕ ವಿಷಯಗಳಲ್ಲಿ ಲೋಕಾಯುಕ್ತರು ಮುಂದಿನ ತನಿಖೆ ಅಗತ್ಯವೆಂದು ತಿಳಿಸಿದ್ದಾರೆ. ಅಂದರೆ ಅವರ ವರದಿ ಪೂರ್ಣ ಪ್ರಮಾಣದಲ್ಲಿ ಇಲ್ಲವೆಂದು ಆಗಿಲ್ಲ.

**ನ್ಯಾಯಯುತವಾಗಿ ಯೋಚಿಸುವಂಥ ಎಲ್ಲಾ ವ್ಯಕ್ತಿಗಳ ಮಧ್ಯೆ ಈ ಬಗ್ಗೆ**

**ವ್ಯಾಪಕವಾಗಿ ಚರ್ಚೆ ನಡೆಯಬೇಕಾದ ತುರ್ತು ಅಗತ್ಯವಿದೆ.**